ಶ್ರೀ ಗುರುಭ್ಯೋ ನಮಃ

# ಪರೀಕ್ಷಿತರಾಜನ ಅಂತಿಮ ದಿನಗಳು

ಸಂಗ್ರಹ ಮತ್ತು ವಿವರಣೆ :

**ಪ್ರೊ॥ ಬದರೀನಾಥಾಚಾರ್ಯ ಘೂಳಿ** ಎಂ.ಎ

**ಲೇಖಕರು**

**ಪ್ರೊ|| ಬದರೀನಾಥಾಚಾರ್ಯ ಘೂಳಿ** ಎಂ.ಎ

ಮಾಧವ ಮಧ್ವ ಪ್ರಕಾಶನ

ನಂ. 164, 7ನೇ ಅಡ್ಡ ರಸ್ತೆ, 7ನೇ ಮುಖ್ಯ ರಸ್ತೆ,

ಬಿ.ಇ.ಎಂ.ಎಲ್. ಬಡಾವಣೆ, 3ನೇ ಹಂತ,

ರಾಜರಾಜೇಶ್ವರಿನಗರ, ಬೆಂಗಳೂರು – 560 098

14-05-2006

ಅಕ್ಷರ ಜೋಡಣೆ

**ಶ್ರೀ ರಾಘವೇಂದ್ರ ಎಂಟಪ್ರೈಸಸ್**

ಬನಶಂಕರಿ 1ನೇ ಹಂತ,

ಬೆಂಗಳೂರು – 560 050

ದೂರವಾಣಿ : 22421294



ಶ್ರೀ ಗುರುಭ್ಯೋ ನಮಃ

# ಪರೀಕ್ಷಿತರಾಜನ ಅಂತಿಮ ದಿನಗಳು

ಶ್ರೀಮದ್ಭಾಗವತ ಪ್ರಥಮ ಸ್ಕಂದ 28ನೇ ಅಧ್ಯಾಯ 24 ರಿಂದ 37ರ ಶ್ಲೋಕಗಳಲ್ಲಿ ವರ್ಣಿತವಾಗಿದೆ. ಪ್ರಸಂಗ ಹೀಗೆ ವಿವರವಾಗಿದೆ.

ಒಮ್ಮೆ ಪರೀಕ್ಷಿತ ರಾಜನು ಭೇಟೆಯಾಡಲು ಧನುರ್ಬಾಣಗಳನ್ನು ಧರಿಸಿ ವನದಲ್ಲಿ ಸಂಚರಿಸಿದಾ. ವನದಲ್ಲಿ ಒಂದು ಮೃಗವೂ ಸಿಗಲಿಲ್ಲ. ಶ್ರಾಂತನಾದ. ಬಾಯಾರಿಕೆ ಆಯಿತು. ನೀರಿಗಾಗಿ ಹುಡುಕಿದ. ಅಲ್ಲೇ ಕೌಶಿಕಿ ಎಂಬ ಒಂದು ಸಣ್ಣ ನದೀ ಕಾಣಿಸಿತು. ಆದರೆ ನದಿಯಲ್ಲಿ ನೀರು ಹರಿಯುತ್ತಿದ್ದಿಲ್ಲ. ಸ್ವಲ್ಪವೂ ನೀರು ಇರಲಿಲ್ಲ.

ನದಿಯಲ್ಲಿ ನೀರೇ ಇರಲಿಲ್ಲವೆಂದರೆ ಪ್ರಾಯಶಃ ಬೇಸಗೆ ಕಾಲ ವೈಶಾಖ ಮಾಸ. ಉರಿಬಿಸಲು. ಅದು ಚಿಕ್ಕ ನದಿಯೇ ಆಗಿರಬೇಕು. ಆಯಿತು. ನೀರಿಗಾಗಿ ಹುಡುಕಿದ. ಅಲ್ಲಿ ಸ್ವಲ್ಪ ದೂರದಲ್ಲಿ ಒಣಗಿದ ನದೀ ಆಚೆ ಒಂದು ಆಶ್ರಮ ಗೋಚರವಾಯಿತು. ರಾಜನಿಗೆ ಸಮಾಧಾನ. ಆ ಋಷ್ಯಾಶ್ರಮ ಇದೇ ಅಂದ ಮೇಲೆ ನೀರು ಇರಲೇಬೇಕು ಎಂದು ವಿಚಾರ ಮಾಡಿ ಆಶ್ರಮದ ಕಡೆಗೆ ನಡೆದ. ಇಲ್ಲಿರುವ ಋಷಿಗಳು ನನ್ನನ್ನು ನೋಡಿದಾಕ್ಷಣ ಬಂದು ಸ್ವಾಗತಿಸುತ್ತಾರೆ. ಆಸನ ಉಪಚಾರಾದಿಗಳು ಸಿಗುವುದೆಂದು ಆಶ್ರಮದ ಕಡೆಗೆ **"ಪ್ರವಿವೇಶ ಆಶ್ರಮಂ ದದರ್ಶ ಮುನಿಮಾಸೀನಂ ಶಾಂತಂ ಮೀಲಿತ ಲೋಚನಂ"** ಹೊರಡುತ್ತಾನೆ. ಯಾರೂ ಕಾಣಲಿಲ್ಲ. ಆದರೆ ಒಬ್ಬ ಋಷಿಗಳು ತಪೋನಿರತರಾಗಿರುವುದನ್ನು ಕಂಡ. ಅವರಾದರೋ ಎರಡೂ ಕಣ್ಣು ಮುಚ್ಚಿ ಪ್ರಶಾಂತ ಮನಸ್ಕರಾಗಿದ್ದರು.

ರೌರವೇಣ = ಜಿಂಕೆಯ ಸಂಬಂಧವಾದ (ರುರೋಃ ಮೃಗಸ್ಯ ಇದಂ = ರುರೋಃ ಕೃಷ್ಣ ಮೃಗಸ್ಯ ವಿದ್ಯಮಾನೇನ ಅಜಿನೇನ ಚ ಸಂವೃತಂ ಆಸೀನಂ)

ಋಷಿಗಳಾದರೂ ಅಸಂಪ್ರಜ್ಞಾತ ಸಮಾಧಿ[1] ಯಲ್ಲಿದ್ದರು. ಅವರ ಇಂದ್ರಿಯಗಳು, ಮನಸ್ಸು ಶ್ರೀ ಪರಮಾತ್ಮನನ್ನೇ ಧ್ಯಾನಿಸುತ್ತಾ ಹೊರಪ್ರಪಂಚದ ಜ್ಞಾನವೇ ಇಲ್ಲದೆ ತಮ್ಮ

---

[1]. ಅಸಂಪ್ರಜ್ಞಾತ ಸಮಾಧಿ – ಏನು ಹಾಗೆಂದರೆ?

ಸಮಾಧಿಯು ಎರಡು ವಿಧ (a) ಸಂ ಪ್ರಜ್ಞಾತ (b) ಅಸಂ ಪ್ರಜ್ಞಾತ ಸಮಾಧಿ ಎಂದು.

(a) **ಸಂ ಪ್ರಜ್ಞಾತ ಸಮಾಧಿ** = ಜ್ಞಾನ ಜ್ಞೇಯ ಮತ್ತು ಜ್ಞಾತೃಗಳ ಭೇದ ತಾತ್ಕಾಲಿಕವಾಗಿ ತಿಳಿಯದೇ ಧ್ಯಾನ ಮಾಡುವ ವಸ್ತುವಿನಲ್ಲೇ ಚಿತ್ತವು ಇಡುವುದು. ಸಂ ಪ್ರಜ್ಞಾತ ಸಮಾಧಿಯು ಸವಿಕಲ್ಪ ಸಮಾಧಿಯೆಂದು ಕರೆಯಲಾಗಿದೆ. ಇಲ್ಲಿ ಏಕಾಗ್ರ ಸ್ವಭಾವವುಳ್ಳ ಚಿತ್ತಕ್ಕೆ ಮಾತ್ರ ಸಾಧ್ಯ.

(b) **ಅಸಂ ಪ್ರಜ್ಞಾತ ಸಮಾಧಿ** = ಮೇಲೆ ತೋರಿಸಿದ ಭೇದವು ವಿಕಾರವಿಲ್ಲದೆ ಹಾಗೂ ದೈಹಿಕ ವ್ಯಾಪಾರವೂ ಇಲ್ಲದೆ ಮನಸ್ಸನ್ನು ನಿಗ್ರಹಿಸಿ ಭಗವಂತನ ರೂಪವನ್ನೇ ಚಿಂತಿಸುತ್ತಾ ಲೀನವಾಗುವುದು. ಇದನ್ನು ನಿರ್ವಿಕಲ್ಪ ಸಮಾಧಿಯೆಂದು ಕರೆಯಲಾಗುವುದು.

ಹೃದಯಾಂತರಾಳದಲ್ಲಿ ಬಿಂಬರೂಪಿ ಭಗವಂತನ ದರ್ಶನ ಪಡೆಯುತ್ತಾ ನಿಶ್ಚೇಷ್ಟಿತರಾಗಿದ್ದರು. ಜಟಾಯುಕ್ತರು ಕೃಷ್ಣಾಜಿನದಿಂದ ದೇಹವು ಆವರಿಸಿತ್ತು. ಇಂತು ಕೂತಿರುವ ಋಷಿಗಳನ್ನು ಕಂಡನು. ಇಲ್ಲಿ ಈ ಋಷಿ ಯಾರು? ಎಂದು ಅವರ ಹೆಸರನ್ನು ಭಾಗವತದಲ್ಲಿ ಉಲ್ಲೇಖವಿಲ್ಲ. ಆದರೆ ಎಲ್ಲಾ ವ್ಯಾಖ್ಯಾನಕಾರರು ಆ ಋಷಿಗಳು ಶಮೀಕರೆಂದು ತಿಳಿಸಿರುತ್ತಾರೆ. ಅವರು **ಶಮೀಕರು** ಎಂದು ಹೇಗೆ ತಿಳಿಯಿತು ? ಇದಕ್ಕೆ ಮಹಾಭಾರತ ಆದಿಪರ್ವದಲ್ಲಿ ಈ ಪ್ರಸಂಗವು ಬಂದಿದೆ. 1 ಆದಿಪರ್ವ 14ನೇ ಅಧ್ಯಾಯದಲ್ಲಿ. ''ಅಸಂಪ್ರಜ್ಞಾತ ಸಮಾಧಿಯಲ್ಲಿದ್ದ. ಮುನಿವರರಾದ **ಶಮೀಕರಿಗೆ** ಯಾವುದೂ ಗೊತ್ತಾಗಲಿಲ್ಲವೆಂದು **ಶಮೀಕರ** ಹೆಸರು ಉಲ್ಲೇಖವಿದೆ.''

ಇನ್ನೊಂದು ಪ್ರಸಂಗ – ಮುನಿಕುಮಾರನು **'ತಸ್ಯಪುತ್ರೋ ಅತಿತೇಜಸ್ವೀ ವಿಹರನ್ ಬಾಲಕೋ ಅರ್ಭಕೈಃ'** ಎಂದಿದೆ. ಶ್ರೀ ವಿಜಯಧ್ವಜೀಯರು **''ತಸ್ಯಬ್ರಹ್ಮರ್ಷೇಃ ಪುತ್ರಃ ಶೃಂಗೀತಿ ನಾಮಕಃ''** ಎಂದು ಋಷಿಕುಮಾರನ ಹೆಸರನ್ನು ತಿಳಿಸಿರುತ್ತಾರೆ. ಅವನಾದರೋ ಅರ್ಭಕಃ ಎಂದಿದೆ. ಅರ್ಭಕ ಅಂದರೆ ಬಾಲಕ, ತಿಳುವಳಿಕೆ ಇಲ್ಲದವ, ಯುಕ್ತಾಯುಕ್ತ ವಿಚಾರರಹಿತನು ಆದರೂ ಮಹಾ ತೇಜಸ್ವಿಯಾಗಿದ್ದನು. **''ಅಹಂ ಶಾಸ್ಮಿ ಪಶ್ಯತ ಮೇಬಲಂ''** ಎಂದು **ಕೌಶಿಕ್ಯಪ ಉಪಸ್ಪೃಶ್ಯ ವಾಗ್ವಜ್ರಂ ವಿಸಸರ್ಜಹ.**

ಕೌಶಿಕ್ಯಪ ಉಪಸ್ಮೃಶ್ಯ ಎಂಬುದಕ್ಕೆ ಕೆಲ ವ್ಯಾಖ್ಯಾನಕಾರರ ಪ್ರಕಾರ ಆಶ್ರಮ ಸಮೀಪದಲ್ಲೇ ಇರುವ ಕೌಶಿಕೀ ನದಿ ನೀರನ್ನು ಆಚಮನ ಮಾಡಿ ಶಾಪಕೊಟ್ಟನು ಎಂದು ಬರೆದಿದ್ದಾರೆ. ಈ ವ್ಯಾಖ್ಯಾನವು ಅಸಂಗತ ಮತ್ತು ಅಪ್ರಮಾಣ. ಏಕೆಂದರೆ ಕೌಶಿಕೀ ನದಿ ಇರಲೇ ಇಲ್ಲ ಎಂಬುದಾಗಿ ಭಾಗವತ ತಿಳಿಸುತ್ತದೆ. ಇನ್ನೂ ಕೆಲವರು ಶೃಂಗಿ ಕೌಶಿಕ ಗೋತ್ರದವನೆಂದು ವ್ಯಾಖ್ಯಾನಿಸಿದ್ದಾರೆ. ಆದರೆ ಶೃಂಗೀ ಆಂಗೀರಸ ಗೋತ್ರದವನು. ಇಂತಹ ಅಸಮಂಜಸ ವಿವರಣೆಗೆ ಶ್ರೀಮದಾಚಾರ್ಯರು ವಿವರಣೆ ಕೊಟ್ಟು ಒಂದು ಹೊಸ ಬೆಳಕನ್ನೇ ತೋರಿಸಿದ್ದಾರೆ. ನೀರೇ ಇಲ್ಲದೇ ಇದ್ದಾಗ ಆಚಮನ ಮಾಡುವ ಪ್ರಸಂಗವೇ ಬರುವುದಿಲ್ಲ. ಅಲ್ಲದೇ ಪರೀಕ್ಷಿತ ರಾಜನು ಶ್ರಾಂತನಾಗಿ ಬಾಯರಿಕೆ ಆಯಿತು. ನೀರಿಗಾಗಿ ಹುಡುಕಿದ. ಎಲ್ಲಿಯೂ ಜಲಾಶಯವು ಕಾಣಲಿಲ್ಲ. **''ಜಲಾಶಯಮಚಕ್ಷಾಣಃ – ಜಲಾಶಯಂ ಜಲಧಾರಾಂ ತಟಾಕಾದಿ ವಿಶೇಷಮಚಕ್ಷಾಣಃ = ಅಪಶ್ಯನ್''** ಎಂದು ಸ್ಪಷ್ಟ ವ್ಯಾಖ್ಯಾನವಿದೆ. ಆದ್ದರಿಂದ ಕೌಶಿಕೀ ಒಣಗಿದ ನೀರೇ ಇಲ್ಲದ ಮೇಲೆ ಆಚಮನ ಮಾಡುವ ಸಂಗತಿ ಕೂಡುವುದಿಲ್ಲ. ಹಾಗೇನಾದರೂ ನೀರು ಇದ್ದಿದ್ದೇ ಆಗಿದ್ದರೆ ಪರೀಕ್ಷಿತ ರಾಜ ನದಿ ನೀರನ್ನು ಕುಡಿದು ಬಾಯರಿಕೆ ತೀರಿಸಿಕೊಂಡು ರಾಜಧಾನಿಗೆ ಹಿಂತಿರುಗುತ್ತಿದ್ದ. ಆಶ್ರಮ ಪ್ರವೇಶ ಪ್ರಸಂಗವೇ ಬರುತ್ತಿದ್ದಿಲ್ಲ. ಹಾಗಾದರೆ ಶೃಂಗೀ ಶಾಪ ಕೊಡುವ ಮುಂಚೆ ಕೌಶಿಕ್ಯಪ ಉಪಸ್ಮೃಶ್ಯ ಎಂದಿದೆ. ಏನು ಹಾಗೆಂದರೆ ? ಇದಕ್ಕೆ ಪರಿಹಾರ ರೂಪ ಉತ್ತರ ಶ್ರೀವಿಜಯಧ್ವಜರ ವಿವರಣೆ ಹೀಗಿದೆ. **ಕೌಶಿಕೀ – ಕುಶಪಾಣಿಃ ಅಪ ಉಪಸ್ಮೃಶ್ಯ – ಆಚಮ್ಯ ವಾಗ್ವಜ್ರಂ ವಿಸಸರ್ಜ. ಕೌಶಿಕೀ** ಎಂದರೆ **ಕುಶಪಾಣಿ** = ಕೈಯಲ್ಲಿ ದರ್ಭೆ



ಹಿಡಿಯುವುದು ಶಾಸ್ತ್ರ ತಿಳಿಸುತ್ತದೆ = ದರ್ಭೆಯನ್ನು ಶಾಸ್ತ್ರೋಕ್ತ ರೀತ್ಯ ಗಂಟು ಕಟ್ಟಿದಾಗ ಪವಿತ್ರವೆಂದೆನಿಸುವುದು. ಹೀಗೆ ದರ್ಭೆಗಳನ್ನು ಬಲಗೈಯಲ್ಲಿ (ಅನಾಮಿಕಾ ಅಂಗುಷ್ಟಗಳ ಮಧ್ಯೆ ಧರಿಸಿದಾಗ ಕುಶಪಾಣಿ ಎನ್ನಲಾಗುವುದು.) ಎರಡು ದರ್ಭೆಗಳನ್ನು ಗಂಟು ಕಟ್ಟಿರುವುದನ್ನು ದೇವ ಕಾರ್ಯಕ್ಕೆ, ಯಜ್ಞ, ಹೋಮ, ಶುಭಕಾರ್ಯಗಳಲ್ಲಿ ಧರಿಸುವುದು. ಮೂರು ದರ್ಭೆಗಳಿಂದ ಮುಡಿ ಹಾಕಿರುವ ಪವಿತ್ರ ಪಿತೃ ಕಾರ್ಯಕ್ಕೆ (ಶ್ರಾದ್ಧ, ಪಕ್ಷ, ತರ್ಪಣ ಇತ್ಯಾದಿ ಪ್ರಸಂಗಗಳಲ್ಲಿ) ಉಪಯೋಗಿಸಿದ ಕಾರ್ಯವು ಸಿದ್ಧಿಸುವುದು/ ಫಲಿಸುವುದು. ಈ ರೀತಿಯಾಗಿ ಶೃಂಗಿಯು ಕುಶಪಾಣಿಯಾಗಿ ಶಾಪ ಕೊಟ್ಟನು. ಇನ್ನು ಕುಶಪಾಣಿಯಾಗಿ ಆಚಮನ ಮಾಡಬೇಕಲ್ಲ? ಇದಕ್ಕೆ ಬ್ರಾಹ್ಮಣರ ಬಲಕಿವಿಯಲ್ಲಿ ಗಂಗಾ ಸಾನ್ನಿಧ್ಯವು ಸದಾ ಇರುವುದು. (ಕುಲಸ್ತ್ರೀಯರ ತಲೆಯ ಬೈತಲಲ್ಲಿ ಗಂಗಾ ಇರುತ್ತಾಳೆ. ಆದ್ದರಿಂದ ಹೆಂಗಸರು ನಿತ್ಯ ತಲೆ ಸ್ನಾನ ಮಾಡಬಾರದು ಎಂದು ಶಾಸ್ತ್ರವಿದೆ.) ಹೀಗಾಗಿ ಶೃಂಗಿಯು ತನ್ನ ಬಲಕಿವಿಯನ್ನು ಸ್ಪರ್ಶಮಾಡಿ ''**ಓಂ**'' ಎಂದು ಉಚ್ಚಾರಮಾಡಿ ಶಾಪ ಕೊಟ್ಟನು. ಶೃಂಗಿಗೆ ಉಪನಯನ ಸಂಸ್ಕಾರವಾಗಿತ್ತು. ಯಾವ ತಪಸ್ಸನ್ನೂ ಮಾಡಿದ್ದಿಲ್ಲ. ವೇದಾಧ್ಯಯನವೂ ಆಗಿದ್ದಿಲ್ಲ. ಆದರೂ ತನ್ನ ತಂದೆಯವರಿಂದ (ಗುರುಗಳಿಂದ) ಗಾಯತ್ರೀ ಮಂತ್ರ ಜಪಾನುಷ್ಠಾನ ಪ್ರಭಾವದಿಂದಲೇ ಶಾಪ ಕೊಡುವ ಶಕ್ತಿ ಲಭಿಸಿತ್ತು.

ಭಾಗವತದಲ್ಲಿ ಬಾಲಕನ ಹೆಸರು **ಶೃಂಗೀ** ಎಂದೂ ಉಲ್ಲೇಖವಿಲ್ಲ. ಆದರೆ ಭಾರತ ಆದಿಪರ್ವದಲ್ಲಿ ೧೪ನೇ ಅಧ್ಯಾಯದಲ್ಲಿ **ಶೃಂಗೀ** ಎಂದು ತಿಳಿಸುತ್ತದೆ.

ಇನ್ನು ಮೂರನೇ ವಿಷಯ – ಪರೀಕ್ಷಿತನಿಗೆ ಶಾಪ ಕೊಟ್ಟಾಯಿತು. ಈ ವಿಷಯ ಸಮಾಧಿಯಿಂದ ಎಚ್ಚರಗೊಂಡ ಶಮೀಕರು ತಮ್ಮ ಮಗನ ಅಚಾತುರ್ಯ ವಿಚಾರರಹಿತ ಶಾಪವು ಅಯುಕ್ತವೆಂದು ತಿಳಿದ ಜ್ಞಾನಿಗಳು ವಿಶಾಪವನ್ನು ಕೊಡಬಹುದಾಗಿತ್ತು. ಅಲ್ಲದೆ ಶೃಂಗೀ ಬಾಲಕನಾದರೂ ತೇಜಸ್ವಿಯಾಗಿದ್ದವನು. ತನ್ನ ತಂದೆಯು ತಿಳಿಸಿದಂತೆ ಬಂದ ಮಹಾರಾಜ ಪಾಂಡವೇಯನಾದ ಪರೀಕ್ಷಿತನೆಂದು ತಿಳಿದಾಗ ವಿಶಾಪವನ್ನು ಕೊಡು ಎಂದು ಹೇಳಬಹುದಾಗಿತ್ತು. ಇಬ್ಬರೂ ಸಮರ್ಥ್ಯರೇ ಆದರೂ ವಿಶಾಪ ಕೊಡಲಿಲ್ಲ. ಆಗ ಶೃಂಗೀ ತಿಳಿಸುತ್ತಾನೆ. 'ತಂದೆ, ನಾನು ನೀಡಿದ ಶಾಪವನ್ನು ಹಿಂತೆಗೆದುಕೊಳ್ಳಲಾರೆ' ಎಂದಾಗ ಶಮೀಕರು ವಿಧಿವಶ ಹೀಗಿರುವುದು ಎಂದು ತಿಳಿದು ಅವರ ಶಿಷ್ಯನಾದ ಗೌರಮುಖ ಎಂಬುವನನ್ನು ರಾಜಧಾನಿಗೆ ಕಳುಹಿಸಿ ರಾಜನಿಗೆ ಒದಗಿರುವ ಶಾಪ ವೃತ್ತಾಂತವನ್ನು ತಿಳಿಸಿದರು.

೧. ಪರೀಕ್ಷಿತ ರಾಜನಿಗೆ ಆಶ್ರಮದಲ್ಲಿ ನೀರು ಸಿಗಲಿಲ್ಲ. ತಪೋನಿರತರಾದವರು ನೀರನ್ನು ಕೇಳಿದರೂ ಕಣ್ತೆರೆದು ನೋಡಲಿಲ್ಲ. ಕರೆಯಲಿಲ್ಲ. ಹೋಗಲಿ, ಒಳ್ಳೆಯ ಮಾತನ್ನಾದರೂ ಆಡಲಿಲ್ಲ ಎಂದು ಕೋಪ ಬಂದಿತು. ಗರ್ಭದಲ್ಲಿರುವಾಗ ಶ್ರೀಕೃಷ್ಣ ಪರಮಾತ್ಮನ ಸುದರ್ಶನ ಚಕ್ರವು ಮಗುವನ್ನು ರಕ್ಷಿಸಿತ್ತು. ಅಲ್ಲದೇ ಅತಿ ಸೂಕ್ಷ್ಮ ರೂಪದಿಂದ ಶ್ರೀಕೃಷ್ಣನ ದರ್ಶನವನ್ನೂ ಪಡೆದಿದ್ದ.

"ಅಶ್ವತ್ಥಾಮ್ನಾ ವಿಸೃಷ್ಟೇನ ಬ್ರಹ್ಮಶೀರ್ಷೇರುತೇಜಸಾ
ಉತ್ತರಾಯಾ ಹತೋ ಗರ್ಭೆ ಈಶೇನೋಪಜೀವಿತಃ ಪುನಃ ॥

ಅಶ್ವತ್ಥಾಮರಿಂದ ಬಿಡಲ್ಪಟ್ಟ ಬ್ರಹ್ಮಾಸ್ತ್ರ ಪ್ರಭಾವದಿಂದಾಗಿ ಉತ್ತರಾದೇವಿ ಗರ್ಭದಲ್ಲಿರುವ ಶಿಶುವು ಮೃತುವಾಯಿತು. ಆದರೂ ಶ್ರೀಕೃಷ್ಣ ಮಗುವನ್ನು ಬದುಕುವಂತೆ (ಜೀವಂತವಾಗಿ) ಮಾಡಿದನಲ್ಲಾ. ಗರ್ಭಸ್ಥನಾದ ಪರೀಕ್ಷಿತನು ತನ್ನ ಸುತ್ತೂ ಪರಿಭ್ರಮಣಿಸುತ್ತಿರುವ ಬ್ರಹ್ಮಾಸ್ತ್ರವನ್ನು ಸುಟ್ಟು ಬೂದಿಮಾಡಿದ ಒಬ್ಬ ವಿಲಕ್ಷಣನಾದ ಪುರುಷನನ್ನು ನೋಡಿದ. ಆ ಪುರುಷನು ಹೇಗೆ ಕಾಣಿಸಿದ"

**ಅಂಗುಷ್ಠಮಾತ್ರಮಮಲಂ ಸ್ಫುರನ್‌ಪುರಟಮೌಲಿನಂ। ಅಪೀಚ್ಯದರ್ಶನಂ ಶ್ಯಾಮಂ ತಟಿದ್ವಾಸ ಸಮಚ್ಯುತಂ । (ಭಾ-೧-೧೧-೮)**

ಹೀಗೆ ಪರಮಾತ್ಮನನ್ನು ಕಂಡು ಅವನಿಂದ ರಕ್ಷಿತನಾಗಿರುವ ಪರೀಕ್ಷಿತರಾಜನಿಗೆ ಒಬ್ಬ ಋಷಿಯು ತನಗೆ ಗೌರವಮಾಡಲಿಲ್ಲವೆಂದು ಕೋಪವು ಬಂದಿತಾದರೂ ಏಕೆ ಹೇಗೆ : ಕೋಪವೂ ಬಂದಿತು. ಮುನಿಯ ತಪಸ್ಸು ನಟನೆ ಎಂದು ತಿಳಿದು ಮಾತ್ಸರ್ಯವಾಯಿತು.

ಸಾಮಾನ್ಯವಾಗಿ ಒಬ್ಬ ಮನುಷ್ಯನಿಗೆ ಹಸಿವೆ ನಿರಡಿಕೆಯಿಂದ ನೀರು ಬೇಡಿದಾಗ ಅವುಗಳನ್ನು ಕೊಡದೇ ಇದ್ದಾಗ ಸಿಟ್ಟು ಬರುವುದು ಸಹಜ. ತನ್ನ ಕಾಮನೆ ಪೂರ್ಣವಾಗಲಿಲ್ಲವೆಂದು ಕೋಪಿಸಿಕೊಳ್ಳುತ್ತಾನೆ. ಇದನ್ನೇ ಶ್ರೀ ಕೃಷ್ಣಗೀತೆಯಲ್ಲಿ (ಗೀತಾ ೨-೬೩) "ಸಂಗಾತ್ ಸಂಜಾಯತೇ ಕಾಮಃ ಕಾಮಾತ್ ಕೋಧೋಭಿಜಾಯತೇ. ಕ್ರೋಧಾದ್ಭವತಿ ಸಂಮೋಹಃ ಸಂಮೋಹಾತ್ ಸ್ಮೃತಿವಿಭ್ರಮಃ ಸ್ಮೃತಿಭ್ರಂಶಾತ್ ಬುದ್ಧಿನಾಶೋ। ಬುದ್ಧಿನಾಶಾತ್ ಪ್ರಣಶ್ಯತಿ ॥" ಪರೀಕ್ಷಿತನಿಗೆ ಇಂತಹದೇ ಅವಸ್ಥೆ ಆಗಿತ್ತು. ಮುಂದೆ ಆ ಮುನಿಗೆ ಅವಮಾನ ಮಾಡುವುದೆಂದು ನಿರ್ಧರಿಸಿದನು. ಯಾವ ಮುನಿಯು ಬಿಂಬರೂಪಿಯಾದ ಭಗವಂತನನ್ನು ತನ್ನ ಹೃದಯಮಂಟಪದಲ್ಲಿ ಕಾಣುತ್ತಿದ್ದನೋ ಅಂತಹ ಪರಮ ಯೋಗಿಯನ್ನು ತಿರಸ್ಕಾರ ಭಾವನೆಯಿಂದ ಅವಮಾನ ಮಾಡಿದನು. ಇದರಿಂದ ರಾಜನಿಗೆ ಬ್ರಹ್ಮಹತ್ಯಾ ದೋಷವೇ ಬಂದಿತು. ಅಂತಹ ಅಕೃತ್ಯವನ್ನು ಮಾಡಿದವನಿಗೆ ತಕ್ಕ ಶಿಕ್ಷೆ ಆಗಲೇಬೇಕು. Parikshitha lost his judgement and behaved like a uncivilized brute. At this stage, someone should punish him for insulting a sage. Nemisis (Retributive justice) took place. ಇದಕ್ಕೆ ತಕ್ಕ ಶಿಕ್ಷೆ ಎಂದರೆ ಮರಣವೇ. ಬೇರೆ ಯಾವುದೂ ಆಗುವುದಿಲ್ಲ. ಹೀಗಾಗಿ ಶೃಂಗೀ ಬಾಲಕನಾದರೂ ಶ್ರೀಹರಿ ಪ್ರೇರಣಾನುಸಾರ ಮೃತ್ಯುಶಾಪವನ್ನೂ ಕೊಟ್ಟನು.

ಪರಮ ಭಗವದ್ಭಕ್ತನು ಭಾಗವತೋತ್ತಮನು ಆದ ಪರೀಕ್ಷಿತನಿಗೆ ಇಂತಹ ದುರ್ಬುದ್ಧಿಯಾದರೂ ಯಾತಕ್ಕಾಗಿ ಬಂತು ? ಎಂಬ ಪ್ರಶ್ನೆಗೆ ಎರಡು ರೀತಿಯ ಸಮಾಧಾನವಿರಲು ಸಾಧ್ಯವಿರುವುದು. (೧) ತಾನು ಹಿಂದೆ ಮಾಡಿದ ಕಲಿನಿಗ್ರಹ ರೂಪ



ಕರ್ಮದ ಫಲವಿರಬಹುದೇ ? ಏಕೆಂದರೆ ಪಾಂಡವರ ನಿರ್ಯಾಣಾ ನಂತರ ಈತನು ಕೌರವಾಧೀಶನಾಗಿ ಹಿರಿಯರ ಆಜ್ಞೆಯ ಪ್ರಕಾರ ರಾಜ್ಯವನ್ನು ಧರ್ಮದಿಂದಲೇ ಆಳುತ್ತಿದ್ದ. ಶ್ರೀಕೃಷ್ಣ ಪರಂಧಾಮಕ್ಕೆ ಪ್ರಯಾಣ ಬೆಳೆಸಿದ ದಿನದಿಂದ ಕಲಿಯುಗವು ಆರಂಭವಾಯಿತು. ಕಲಿರಾಜ್ಯವಾಗಬೇಕಿತ್ತು. ಆದರೆ ಪಾಂಡವೇಯನು ಕಲಿಯನ್ನು ನಿಗ್ರಹಿಸಿ ಅವನನ್ನು ರಾಜ್ಯಭ್ರಷ್ಟನನ್ನಾಗಿ ಮಾಡಿ ಅವನಿಗೆ ಐದು ಸ್ಥಾನಗಳನಷ್ಟೇ ಕೊಟ್ಟಿದ್ದ. ಕಲಿಪುರುಷನಿಗೆ ಅವಮಾನವಾಯಿತು. ಮನಸಾ ನೊಂದುಕೊಂಡು ಬೇರೆ ಮಾರ್ಗವಿಲ್ಲದೇ ಪರೀಕ್ಷಿತನ ಅಂತ್ಯ ಘಳಿಗೆಗಾಗಿ ಕಾಯುತ್ತಿದ್ದ. ಸಮಯಕ್ಕಾಗಿ ಕಾಯುತ್ತಿದ್ದ. ಆ ಪ್ರಸಂಗ ಈಗ ಬಂದಿತು. ಯಾರಿಂದ ಕಲಿಯದಮನವಾಗಿತ್ತೋ ಆ ರಾಜನಿಗೂ ಕಲಿಪ್ರಭಾವ ಬಿಡಲಿಲ್ಲ. ಪರೀಕ್ಷಿತನು ಭೇಟೆಗಾಗಿ ಹೋರಡುವಾಗ ಕರ್ಣ, ಕವಚ, ಕುಂಡಲ, ಮಕುಟವನ್ನು ಧರಿಸಿದ್ದ. ಅವೆಲ್ಲಾ ಸ್ವರ್ಣಮಯವಾಗಿದ್ದವು. ಸ್ವರ್ಣ ಆಭರಣ ಕಿರೀಟ ಕಲಿಯು ವಾಸಿಸುವ ಸ್ಥಳವೇ ಆಗಿತ್ತು. ಬಂಗಾರದ ಕಿರೀಟ ಧಾರಣ ಮಾಡಿದ ರಾಜನ ಶಿರಸ್ಸಿನಲ್ಲೆ ಕಲಿ ತಳ ಊರಿದ. ಅವನ ಪ್ರಭಾವದಿಂದ ರಾಜನಿಗೆ ಬುದ್ಧಿನಾಶವಾಯಿತು. ತತ್ಪರಿಣಾಮವಾಗಿ ಬ್ರಾಹ್ಮಣೋತ್ತಮನಿಗೆ ದ್ರೋಹ ಮಾಡುವಂತೆ ಬುದ್ಧಿ ಪ್ರೇರಣೆ ಮಾಡಿದವನೇ ಕಲಿ.

ಇನ್ನು ಎರಡನೆಯ ಕಾರಣ. ಪ್ರಾಯಶಃ ಯುಕ್ತಿಯಿಂದ ಹೇಳಲು ಬರುವುದೇ ವಿನಃ ಪ್ರಮಾಣವಿಲ್ಲ. ಒಂದು ಪುರಾಣದಲ್ಲಿ ತಿಳಿಸಿದಂತೆ ಪರೀಕ್ಷಿತ ರಾಜನು ಧರಿಸಿದ ಕಿರೀಟವು ಬ್ರಹ್ಮದ್ರೋಹಿಯಾದ ಜರಾಸಂಧನದ್ದು. ಹಿಂದೆ ಶ್ರೀಕೃಷ್ಣನ ಅಪ್ಪಣೆಯಂತೆ ಭೀಮಸೇನ ಜರಾಸಂಧನನ್ನು ಸಂಹಾರ ಮಾಡಿದ ಮೇಲೆ ಅವನ ಕೋಶಾಗಾರದಲ್ಲಿರುವ ರತ್ನಾಭರಣ ನಿಧಿಗಳನ್ನು ತಂದನು. ಅವುಗಳಲ್ಲಿ ಜರಾಸಂಧನ ಸ್ವರ್ಣಮಯ ಕಿರೀಟವನ್ನು ತಂದು ಪಾಂಡವರ ಕೋಶಾಗಾರದಲ್ಲಿ ಇರಿಸಿದ್ದ. ಕಾಲಕ್ರಮೇಣ ಪರೀಕ್ಷಿತ ರಾಜನಿಗೆ ಆ ಸುಂದರ ಕಿರೀಟವನ್ನು ಧಾರಣ ಮಾಡಬಯಸಿ ಹೊರಟ. ಆದರೆ ಅದು ಕೃಷ್ಣ ದ್ವೇಷಿಯ ಕಿರೀಟವೆಂದು ತಿಳಿದಿದ್ದಿಲ್ಲ. ಧಾರಣ ಮಾಡಿ ಬೇಟೆಗಾಗಿ ಹೊರಟ. ತತ್ಪರಿಣಾಮವಾಗಿ ಜರಾಸಂಧನ ದುಷ್ಟ ಕಿರೀಟದ ಪ್ರಭಾವದಿಂದಾಗಿ ಕಲಿಯು ಅದರಲ್ಲಿ ಪ್ರವೇಶಿಸಿ ಅಕಾರ್ಯ ಮಾಡುವಂತಾಯಿತು.

ಈ ಪ್ರಸಂಗವು ಎಷ್ಟರ ಮಟಿಗೆ ಪ್ರಾಮಾಣ್ಯವೋ ತಿಳಿಯದಾದರೂ ಆಗಿನ ಪರಿಸ್ಥಿತಿಗೆ ತಕ್ಕಂತೆ ಯುಕ್ತಿಯ ಪ್ರಕಾರ ಇರಬಹುದೇನೋ ಅನಿಸುವುದು ವಿಮರ್ಶಾತ್ಮಕವಾಗಿದೆ.

ಇನ್ನೊಂದು ಮುಖ್ಯ ವಿಷಯ. ಶಮೀಕರ ಪುತ್ರ. ಶೃಂಗೀ ಅರ್ಭಕನೆಂದಿದೆ. ಅಂದರೆ ಅವನಿಗೆ 8 ವರ್ಷದ ಹುಡುಗ. ಏಕೆಂದರೆ ಭಾಗವತದಲ್ಲಿ **"ತಸ್ಯ ಪುತ್ರೋಽತಿ ತೇಜಸ್ವೀ ಬಾಲಕೋಽರ್ಭಕೈಃ ವಿಹರನ್ । ರಾಜಾಽಘಂ ಪ್ರಾಪಿತ ತಾತಂ ಶೃತ್ವಾ ತತ್ರೇದಮಬ್ರವೀತ್"** ಶೃಂಗೀ ಇತರ ಆಶ್ರಮ ಬಾಲಕರೊಂದಿಗೆ ಆಡುತ್ತಲಿದ್ದ ಅವನಿಗೆ ಮತ್ತೊಬ್ಬ ಅರ್ಭಕನು ರಾಜನು ಬಂದದ್ದು ಶಮೀಕರಿಗೆ ಅವಮಾನ ಮಾಡಿದ ವಿಷಯ

ತಿಳಿಸಿದ. ಎಂಟು ವರ್ಷದ ಬಾಲಕನಾದರೂ ತೇಜಸ್ವೀ ಎಂದೂ ಆಗ್ಗೆ ಅವನಿಗೆ ಉಪನಯನವಾಗಿರಲೂ ಸಾಕು. ಗಾಯತ್ರಿ ಮಂತ್ರೋಪದೇಶದಿಂದ ತೇಜಸ್ಸುಹೊಂದಿರಬೇಕು. ಅಂದರೆ ಶಾಪಕೊಡಲು ಸಮರ್ಥನಾಗಿರುತ್ತಾನಾದ್ದರಿಂದ ಶಾಪವನ್ನು ಕೊಟ್ಟನು. ಈ ವಿಷಯ ಶಮೀಕರಿಗೆ ತಿಳಿದಾಗ ಛೀಮಾರಿ ಮಾಡಿದರು. ಶೃಂಗಿ ಹೇಳುತ್ತಾನೆ. "ತನಗೆ ವಿಶಾಪ ಕೊಡಲು ಬರುವುದಿಲ್ಲವೆಂದು." ಶಾಪಕೊಡಲು ಸಮರ್ಥರಾದ ಮುನಿಗಳು ದೇವತೆಗಳು ಪುರಾಣಗಳಲ್ಲಿ ವಿಶಾಪವನ್ನು ಕೊಟ್ಟಿದ್ದನ್ನು ಕಂಡಿದ್ದೇವೆ. ಆದರೆ ಇಲ್ಲಿ ಶೃಂಗೀ ಶಾಪವನ್ನು ಹಿಂತೆಗೆಯುವ ಅಸಮರ್ಥತೆಯನ್ನು ತಿಳಿಸುತ್ತಾನೆ. ಏಕೆ ? ಎಂಬ ಪ್ರಶ್ನೆ ಉದ್ಭವವಾಗುತ್ತೆ. ಶಾಸ್ತ್ರದಲ್ಲಿ ತಿಳಿಸಿದಂತೆ ಬ್ರಾಹ್ಮಣ ಬಾಲಕನಿಗೆ ಬ್ರಹ್ಮೋಪದೇಶ (ಉಪನಯನ) ಆದ ಕೂಡಲೇ ಎಲ್ಲಾ ಸಾಮರ್ಥ್ಯ ಬರುವುದಿಲ್ಲ. ಆ ಸಾಮರ್ಥ್ಯ ಲಭಿಸಬೇಕಾದರೆ ಉಪಾಕರ್ಮ ಸಂಸ್ಕಾರವಾಗಿರಬೇಕು. ಅಲ್ಲಿಯವರೆಗೂ Probationary period ಪರೀಕ್ಷಾರ್ಥ ಅವಧಿ ತೇರ್ಗಡೆಯಾಗಿರಬೇಕು. ಆದ ನಂತರವೇ ಬ್ರಾಹ್ಮಣ ವಟುವಿಗೆ ಶಾಪಾನುಗ್ರಹ ಶಕ್ತಿ ಬರುತ್ತದೆ. ಅಂದ ಮೇಲೆ ಶೃಂಗಿಗೆ ಉಪನಯನವಾಗಿ ಉಪಾಕರ್ಮಸಂಸ್ಕಾರವಾಗಿದ್ದಿಲ್ಲ ಎಂದೇ ಅವನು ಅಸಹಾಯಕತೆಯನ್ನು ತಿಳಿಸುತ್ತಾನೆ ಎಂದು ತಿಳಿಯುಬರುತ್ತೆ. ಇದಕ್ಕೆ ಕಾರಣ ಹೀಗೆ ವಿಚಾರಿಸಬಹುದು.

ಪರೀಕ್ಷಿತ ರಾಜ ಭೇಟೆಗಾಗಿ ಹೊರಟು ನೀರಿಗಾಗಿ ಹುಡುಕಿದ ಬಾಯಿ ಒಳಗಿತ್ತು. ಮೇಲೆ ಮಟಮಟ ಬೀಸಲು. ಪ್ರಾಯಶಃ ವೈಶಾಖ ಮಾಸವಾಗಿರಬೇಕು. ಹಸ್ತಿನಾವತಿ (Delhi) ಹಾಗೂ ಉತ್ತರ ಭಾರತದಲ್ಲಿ ಬೇಸಿಗೆಯು ಅತಿತೀಕ್ಷ್ಣ ಆ ಹೊತ್ತಿಗೆ ಶೃಂಗೀಗೆ ಉಪನಯನವಾಗಿ 4-5 ತಿಂಗಳಾಗಿರಬೇಕು. ಮುಂದೆ ಉಪಾಕರ್ಮವು ಶ್ರಾವಣ ಮಾಸದಲ್ಲೇ ಆಗಬೇಕಲ್ಲವೇ ? ಹೀಗಾಗಿ ಶೃಂಗಿಯು ಅಸಮರ್ಥನಾದನು. **ಉಪಾಕರ್ಮ** ಎಂದರೇನು? ಹೋಮಪೂರ್ವಕ ಶ್ರಾವಣ ಮಾಸದಲ್ಲಿ ಉಪನಯನವಾದ ಮೇಲೆ ಬ್ರಾಹ್ಮಣ ವಟುವಿಗೆ ವೇದಾಧ್ಯಯನ ತಪಸ್ಸು ಮಾಡಲು ಶಾಸ್ತ್ರರೀತ್ಯಾ ಆರಂಭ. ಬ್ರಹ್ಮಚರ್ಯ ಪಾಲನೆಯಿಂದ ಬ್ರಹ್ಮ ತೇಜಸ್ಸನ್ನು ಪಡೆಯಲು ಮೊದಲ ಹೆಜ್ಜೆ **(ಹಸ್ತೇನ್ಯೊಷಥಿಭಾವೇ ವಾಪಂಚಮ್ಯಾಂ ಶ್ರಾವಣಸ್ಯತು । ಅಧ್ಯಾಯಾನಾ ಮುಪಾಕರ್ಮ ಶ್ರಾವಣ್ಯಾಂಶ್ರವಣೇನವಾ॥ (ಯಾಜ್ಞವಲ್ಕ್ಯ-1-142)**

ಇಂತಹ ಅಧಿಕಾರ ಸಂಪಾದನೆ ಮಾಡಿದ್ದಿಲ್ಲವಾದ್ದರಿಂದ ವಿಶಾಪ ಕೊಡುವ ಯೋಗ್ಯತೆ ಇದ್ದಿಲ್ಲ. ಋಷಿಗಳಾದ ಶಮೀಕರು ಅಪರೋಕ್ಷ ಜ್ಞಾನಿಗಳು ತ್ರಿಕಾಲ ಜ್ಞಾನಿಗಳು. ವಿಶಾಪ ಕೊಡುವುದಕ್ಕೆ ಸರ್ವ ಸಮರ್ಥರು. ಆದರೂ ಅವರಾದರೂ ಮಾಡಬಹುದಾಗಿತ್ತಲ್ಲಾ? ಅಂದರೆ ಪರೀಕ್ಷಿತ ರಾಜನಿಗೆ ಪ್ರಾರಬ್ಧವಿದ್ದಿತು. ಅವನು ಜನಿಸಿದಾಗ ಪುರೋಹಿತರು ರಾಜನ ಅಂತ್ಯ ಸರ್ಪದೃಷ್ಟನಾಗುವುದಾಗಿ ತಿಳಿಸಿದ್ದರು. ಈ ವಿಷಯ ಋಷಿಗಳಿಗೆ ತಿಳಿದಿತ್ತು. ಅಲ್ಲದೇ ಪರೀಕ್ಷಿತನಿಗೆ ಇದು ಕಾಲ ಮೃತ್ಯುವೇ ಆಗಿತ್ತು. ಇದು ಅವನ ಅಂತಿಮ ಚರ್ಮಶರೀರವಾಗಿ ಮುಕ್ತಿಯನ್ನೇ ಹೊಂದುತ್ತಾನೆಂದು ವಿಧಿವಿಲಾಸಕ್ಕೆ



ಮನ್ನಣೆ ಕೊಟ್ಟರು. ಹೀಗಾಗಿ ರಾಜನ ಮರಣವನ್ನು ಯಾರಿಂದಲೂ ತಪ್ಪಿಸಲು ಆಗಲಿಲ್ಲ. ಸರ್ಪದಿಂದ ಕಚ್ಚಿ ಮೃತನಾದರೂ ರಾಜನಿಗೆ ದುರ್ಮರಣವಾಗಿಲ್ಲ. ಇದನ್ನು ಶ್ರೀಶುಕಾಚಾರ್ಯರು ರಾಜನಿಗೆ ಭಾಗವತಾಮೃತವನ್ನು ಪಾನ ಮಾಡಿಸಿ ಕೊನೆಗೆ ಶ್ರೀಶುಕಾಚಾರ್ಯರು **ಅತ್ರಾನು ವರ್ಣ್ಯತೇಽಭೀಕ್ಷ್ಣಂ ವಿಶ್ವಾಸಾತ್ಮಾ ಭಗವಾನ್ ಹರಿಃ। ಯಸ್ಯಪ್ರಸಾದಜೋ ಬ್ರಹ್ಮಾರುದ್ರಃ ಕ್ರೋಧಸಮುದ್ಭವಃ।**

**ತ್ವಾಂತು ರಾಜನ್ ಮರಿಷ್ಯೇತಿ ಪಶು ಬುದ್ಧಿಮಿಮಾಂ ಜಹಿ । ನ ಜಾತಃ ಪ್ರಾಗ್ ಭೂತೋಽದ್ಯ ದೇಹವತ್ವಂ ನಂಜ್ಕ್ಷ್ಯಸಿ । ನಭವಶಿಷ್ಯಸಿ ಭೂತ್ವಾ ತ್ವಂ ಪುತ್ರಪೌತ್ರಾದಿ ರೂಪವಾನ್। ಬೀಜಾಂಕುರವದ್ ದೇಹಾದೆರ್ವ್ಯತಿರಿಕ್ತೋ ಯಥಾನಲಃ। ------ ಚೋದಿತೋ ವಿಪ್ರವಾಕ್ಯೇನ ನತ್ವಾಂದಹ್ಯತಿ ತಕ್ಷಕಃ । ಮೃತ್ಯವೋನೋಪಥಕ್ಷ್ಯಂತಿ ಮೃತ್ಯೂನಾಂ ಮೃತ್ಯುಮೀಶ್ವರಮ್ । ------ ದಹಂತಂ ತಕ್ಷಕಂ ಪಾದೇ ಲೇಲಿಹಾ ನಂ ವಿಷಾನನೈಃ । (ಭಾಗ ೧೨-೪-೧ ರಿಂದ ೧೩)**

ಪಶು : ವಿವರಣೆ : ಶ್ರೀ ಶುಕಾಚಾರ್ಯರು ಪರೀಕ್ಷಿತರಾಜನನ್ನು **ಪಶುಬುದ್ಧಿಮಿಮಾಂ ಜಹಿ** ಎಂದಿದ್ದಾರೆ. ಪಶು ಎಂದರೆ ಏನು ? ಅಜ್ಞಾನಿಯಂತೆ ತಿಳುವಳಿಕೆ ಇಲ್ಲದವ ಅವಿಚಾರವಂತ ಎಂಬ ಅರ್ಥ. ಆದರೆ ಪರೀಕ್ಷಿತ ಮಹಾಜ್ಞಾನಿ. ಅಂಥವನಿಗೆ ಈ ಪಶುರೂಪ ಬುದ್ಧಿ ಬಂದಿತಲ್ಲ ಎಂಬುದಾಗಿ ತಿಳಿಸುತ್ತಾರೆ.

ರಾಜನ್ ಈವರೆಗೂ ನಿನಗೆ ಉಪದೇಶಿಸಿದಂತೆ ನಾನು ಸಾಯುವೆನು ಎಂಬ ಪಶು ಬುದ್ಧಿಯನ್ನು ಬಿಡು. ಶ್ರೀಹರಿಪಾದರಂಜಿತ ಚಾರುಚರಿತ್ರೆಯನ್ನು ಕೇಳಿದ ನೀನು ಧನ್ಯವಂತ. ಅಂತ್ಯಕಾಲದಲ್ಲಿ ಶ್ರೀಶನ ಸ್ಮರಣೆ ಮಾಡು, ದೇಹಾಭಿಮಾನ ಬಿಡು. ನಿನ್ನ ಜನನವು ಸಾಧಾರಣ ಶಿಶುಗಳಂತೆ ಆಗದೇ ಶ್ರೀರಮಾರಮಣನ ದರ್ಶನದಿಂದ ಆಗಿದೆ. ಅಂತೆಯೇ ನೀನು ಈ ದೇಹ ಬಿಡುತ್ತಲೇ ಮತ್ತೊಂದು ದೇಹ ಬರುವುದಿಲ್ಲ. ನಿನಗೆ ಸಾವೆಂಬುದಿಲ್ಲ. ಏಕೆಂದರೆ ನಿನ್ನ ತೇಜಸ್ಸು ಅಂಕುರವಾಗಿ ನಿನ್ನ ಮಕ್ಕಳು ಮೊಮ್ಮಕ್ಕಳಲ್ಲಿ ಒಂದಂಶದಿಂದ ಇರುತ್ತೀಯೆ. ತಕ್ಷಕನನ್ನು ಅಲಕ್ಷಿಸು. ಹರಿಧ್ಯಾನಾಸಕ್ತನಾಗು. ಜೀವವನ್ನು ಹೃದಯ ಮಧ್ಯದಲ್ಲಿ ನಿರೋಧಿಸು. ಅಚಿಂತ್ಯಾದ್ಭುತ ಶಕ್ತಿಯುಳ್ಳ ರಮೇಶನು ಬಿಂಬರೂಪಿಯಾಗಿರುತ್ತಾನೆಂದು ಸ್ಮರಿಸು. ವಾಯುವನ್ನು ಪ್ರಾಜ್ಞ ನಾಮಕನ ಅಧೀನವೆಂದು ತಿಳಿ. ಶ್ವಾಸ ನಿರೋಧಿಸಿ ಭ್ರೂಮಧ್ಯ ಪ್ರದೇಶಕ್ಕೆ ಬರುವಂತೆ ಮಾಡು. ನಿನ್ನ ಈ ರೀತಿ ಅಸಂಪ್ರಜ್ಞಾತ ಸಮಾಧಿಯಲ್ಲಿ ಈ ಬಾಹ್ಯ ಪ್ರಪಂಚ, ಬಂಧು-ಬಾಂಧವರು ಯಾರೂ ಕಾಣಲಾಗದು. ಶ್ರೀಹರಿಯನ್ನೇ ಧ್ಯಾನಿಸುತ್ತಾ ಬ್ರಹ್ಮರಂಧ್ರದಿಂದ ನಿನ್ನ ಜೀವವು ನಿರ್ಯಾಣವಾಗುವುದು. ತಕ್ಷಕನು ಬರುತ್ತಾನೆ, ನಿನ್ನ ಪಾದದ ಬೆಟ್ಟನ್ನು ಕಚ್ಚುತ್ತಾನೆ. ಆದರೆ ಆ ಹೊತ್ತಿಗೆ ನೀನು ಹರಿಪರಾಯಣನಾಗಿರುವೆ. ತಕ್ಷಕನು ಕಚ್ಚುವುದು ನಿನ್ನ ಭೌತಿಕ ಮೃತಶರೀರವನ್ನಷ್ಟೆ. ರಾಜನೇ ಹಿಂದೆ ತಿಳಿಸಿದಂತೆ ನಿನಗೆ ಅಪಮೃತ್ಯುದೋಷ ಬರುವುದಿಲ್ಲ. ಜಗತ್ತಿನಲ್ಲಿ ನಿನ್ನ ಅಮರಖ್ಯಾತಿ

ಚಿರಕಾಲವಿರುವುದು. ರಾಜನ್ ಹರಿವಶನಾಗು. ನಾನು ನಿನಗೆ ಏನು ಬೋಧಿಸಬೇಕೆಂದಿದ್ದೆನೋ ಅದನ್ನು ಹೇಳಿಯಾಯಿತು. **ಏತತ್ತೇ ಕಥಿತಂ ತಾತ ಯಥಾಽಽತ್ಮಾ ಪೃಷ್ಟವಾನ್ ನೃಪ । ಹರಿರ್ವಿಶ್ವಾತ್ಮನಶ್ಚೇಷ್ಟಾಂ ಕಿಂಭೂಯಃ ಶ್ರೋತುಮಿಚ್ಛಸಿ** ರಾಜನ್. ಇನ್ನೇನು ಕೇಳಬೇಕೆಂದಿರುವೆಯೋ ಕೇಳು. ನಿನಗೆ ಮಂಗಳವಾಗಲಿ. ಧನ್ಯನಾಗು ಎಂದು ಹೇಳಿದರು.

ಇಲ್ಲಿ ಒಂದು ಪ್ರಶ್ನೆಗೆ ಉತ್ತರ ಸಿಗಲಿಲ್ಲ. ಏನದು ? ಶಮೀಕರ ಸುತ ಶೃಂಗಿಯು ಶಾಪಕೊಟ್ಟನು. ಆದರೆ ಶೃಂಗಿಯು ರಾಜನ ಮರಣಕ್ಕೆ ತಕ್ಷಕನನ್ನೇ ಏಕೆ ಸ್ಮರಿಸಿದ ? ಇದರ ಹಿನ್ನೆಲೆ ಏನು ? ತಕ್ಷಕನಿಗೂ, ಪರೀಕ್ಷಿತನಿಗೂ ಯಾವ ಸಂಬಂಧ ? ದಕ್ಷ ಪ್ರಜಾಪತಿಗೆ ಹದಿಮೂರು ಹೆಣ್ಣು ಮಕ್ಕಳಲ್ಲಿ ಕದ್ರು ಒಬ್ಬಳು. ಕಶ್ಯಪ ಮುನಿಯ ಮಡದಿಯರು. ಕದ್ರು ಸರ್ಪಗಳನ್ನು ಪಡೆದಳು. ಶೇಷ, ತಕ್ಷಕ, ವಾಸುಕಿ ಕಾಲೀಯ ಧನಂಜಯ ಎಂದು ಇಂದ್ರನ ಉದ್ಯಾನವನದಲ್ಲಿ ಒಂದಾಗಿದ್ದ ಖಾಂಡವವನದಲ್ಲಿ ಅನೇಕ ಆಯುರ್ವೇದಯುಕ್ತ ಔಷಧಿ ಗಿಡಮೂಲಿಕೆಗಳು ತುಂಬಿದ್ದಿತು. ಒಮ್ಮೆ ವರುಣ ಲೋಕದಲ್ಲಿ ಶ್ವೇತಕಿ ಎಂಬ ರಾಜ ಹನ್ನೆರಡು ವರ್ಷ ಕಾಲ ಸತತವಾಗಿ ಯಜ್ಞ ಮಾಡಿದನು. ಅಗ್ನಿ ದೇವನಿಗೆ ಹೋಮ ಪದಾರ್ಥಗಳನ್ನು ಭಕ್ಷಿಸಿದ್ದರ ಫಲವಾಗಿ ಅಜೀರ್ಣವಾಯಿತು. ಜೀರ್ಣ ಮಾಡಿಕೊಳ್ಳುವ ಸಾಮಾರ್ಥ್ಯ ಕುಗ್ಗಿತು. ಆಗ ಅಗ್ನಿದೇವ ದೇವತೆಗಳು ವೈದ್ಯರಾದ ಅಶ್ವಿನಿ ದೇವತೆಗಳನ್ನು ಕೇಳಿಕೊಂಡರು. ಆಗ ಅಶ್ವಿನಿ ದೇವತೆಗಳು ಒಂದು ಉಪಾಯ ಹೇಳಿದರು. "ಅಗ್ನಿದೇವ, ಇಂದ್ರನ ವನವಾದ ಖಾಂಡವವಿದೆ. ಅಲ್ಲಿ ಹೇರಳವಾಗಿ ನಿನ್ನ ಅಜೀರ್ಣವನ್ನು ಹೋಗಲಾಡಿಸುವ ಮೂಲಿಕೆಗಳಿವೆ. ಅವುಗಳನ್ನು ಸೇವಿಸಿದೆಯಾದರೆ ನಿನ್ನ ಜೀರ್ಣಶಕ್ತಿ ಪುನಃ ಮರುಕಳಿಸುವುದೆಂದು ಹೇಳಿದರು. ಅಗ್ನಿಯು ಬ್ರಾಹ್ಮಣ ವೇಷ ಧರಿಸಿ ಶ್ರೀಕೃಷ್ಣಾರ್ಜುನರಲ್ಲಿ ಹೋಗಿ ತನಗೆ ಖಾಂಡವ ದಹನಕ್ಕೆ ಅನುಮತಿ ಕೇಳಿ ಪಡೆದ ಖಾಂಡವವು ಅಗ್ನಿಯಿಂದ ಸುಡಲಾರಂಭಿಸಿತು. ಆ ಸಮಯದಲ್ಲಿ ಇಂದ್ರನ ಸಖನಾದ ತಕ್ಷಕನು ವನದಲ್ಲಿ ಮಡದಿಯೊಂದಿಗೆ ವಾಸಮಾಡುತ್ತಿದ್ದ. ವನವು ಸುಡಲಾರಂಭಿಸಿದಾಗ ತಕ್ಷಕನ ಹೆಂಡತಿ ತಪ್ಪಿಸಿಕೊಂಡು ಹಾರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾಗ ಅರ್ಜುನ ಅವಳ ತಲೆಯನ್ನು ಕತ್ತರಿಸಿದ. ತಕ್ಷಕ ಹೇಗೋ ಉಳಿದುಕೊಂಡನು. ತನ್ನ ಮಡದಿಯ ಸಾವಿಗೆ ಅರ್ಜುನನೇ ಕಾರಣನೆಂದು ಹಗೆ ತುಂಬಿತು. ಕುರುಕ್ಷೇತ್ರದಲ್ಲಿದ್ದ ನಾಗಕುಲದ ೨೭ ನಾಗ ವಂಶಗಳಿಗೆ ರಾಜನಾಗಿದ್ದ. (ಆದಿಪರ್ವ 253-54) ಮಹಾಭಾರತ ಯುದ್ಧ ಆರಂಭವಾಯಿತು. ಭೀಷ್ಮ ದ್ರೋಣರ ಪತನಾ ನಂತರ ಕರ್ಣ ಸೇನಾಧಿಪತ್ಯವನ್ನು ಪಡೆದ. ಇದೇ ಯೋಗ್ಯ ಸಮಯವೆಂದು ಬಗೆದು ತಕ್ಷಕನು ಕರ್ಣನಲ್ಲಿಗೆ ಬರುತ್ತಾನೆ. ಅವನಿಗೆ ಅರ್ಜುನನು ಮಹಾ ಶತ್ರುವೆಂದೂ ಅರ್ಜುನನ್ನು ಕೊಲ್ಲುವುದಾಗಿ ಪಣ ಕಟ್ಟಿದ್ದ ವಿಷಯ ತಕ್ಷಕನಿಗೆ ತಿಳಿದಿತ್ತು. ಕರ್ಣನ ಸಹಾಯಾರ್ಥವಾಗಿ ಕರ್ಣನ ಬತ್ತಳಿಕೆಯಲ್ಲಿ ಸೇರಿದ. ಇದರಿಂದ ಕರ್ಣ ಅಸ್ತ್ರ ಪ್ರಯೋಗ ಮಾಡುತ್ತಾನೆ. ತತ್ಪರಿಣಾಮವಾಗಿ ಅರ್ಜುನ ಹತನಾಗುವನು ಎಂದು. ಹೀಗಾಗಿ ಅರ್ಜುನನ ಮೇಲೆ ಹಿಂದಿನ ದ್ವೇಷ ಈಗ



ತೀರಿಸಿದಂತಾಗುವುದು ಎಂದುಕೊಂಡ. ಒಂದು ಅಸ್ತ್ರದಲ್ಲಿ ನಾಗಾಸ್ತ್ರ ರೂಪದಲ್ಲಿ ಸೇರಿದ. ಕರ್ಣ ನಾಗಾಸ್ತ್ರವನ್ನು ಪ್ರಯೋಗ ಮಾಡಿದ. ಆದರೂ ಶ್ರೀಕೃಷ್ಣನು ಅರ್ಜುನನ ರಥವನ್ನು ಸ್ವಲ್ಪ ನೆಲದಲ್ಲಿ ಕುಗ್ಗುವಂತೆ ಮಾಡಿದ. ನಾಗಾಸ್ತ್ರವು ಅರ್ಜುನನ ಕಿರೀಟವನ್ನಷ್ಟೇ ಉರುಳಿಸಿತು. ಅರ್ಜುನನಿಗೆ ಅಪಾಯವಾಗಲಿಲ್ಲ. ತಕ್ಷಕ ಪುನಃ ಕರ್ಣನನ್ನು ಬೇಡಿದ. ಮತ್ತೊಮ್ಮೆ ನಾಗಾಸ್ತ್ರವನ್ನು ಪ್ರಯೋಗಿಸುವಂತೆ. ಕರ್ಣ ತನ್ನ ತಾಯಿ ಕುಂತಿಗೆ ವಚನ ಕೊಟ್ಟಂತೆ ಬಿಟ್ಟ ಬಾಣವನ್ನು ಮರಳಿ ಬಿಡುವುದಿಲ್ಲವೆಂದು ತಿಳಿಸಿದ. ತಕ್ಷಕನಿಗೆ ನಿರಾಶೆಯಾಯಿತು. ಅರ್ಜುನನ ಸಂಹಾರವಾಗಲಿಲ್ಲವೆಂದು ದುಃಖಿಸಿದ. ವಿಧಿವಶಾತ್ ಅರ್ಜುನನ ಮೊಮ್ಮಗನಾದ ಪರೀಕ್ಷಿತನ ಕಡೆ ತಕ್ಷಕನ ದೃಷ್ಟಿ ತಿರುಗಿತು. ಅವನಿಗೆ ಕಲಿರೂಪಿ ಸಹಾಯವಾಯಿತು. ಶೃಂಗೀ ಶಾಪವು ನಿಮಿತ್ತವಾಯಿತು. ಅರ್ಜುನನ್ನು ಸಂಹಾರ ಮಾಡಲು ಆಗದಿದ್ದರೇನು ? ಅವನ ವಂಶದ ಬೀಜವನ್ನೇ ಅಳಿಸಲು ಹವಣಿಸಿದ. ಈಗ ಆ ಸಮಯ ಫಲಿಸಿತು. ಹೀಗೆ ಪರೀಕ್ಷಿತನ ಅಂತ್ಯಕ್ಕೆ ಶೃಂಗಿಯು ನೆಪ ಮಾತ್ರ. ಪರಮಾತ್ಮನ ವಿಚಿತ್ರ ವಿಲಾಸ. ಭಗವಂತನು ಸೂತ್ರಧಾರಿ. ಯಾರ್‍ಯಾರು ನಾಟಕ ಪಾತ್ರರಾಗಬೇಕೋ ಆ ರೀತಿ ಜಗನ್ನಾಟಕ ಸೂತ್ರಧಾರಿ "ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ" ಅಂತ ಗೀತೆಯಲ್ಲಿ ಹೇಳಿಲ್ಲವೇ ? ಶ್ರೀಕೃಷ್ಣ ಪರಂಧಾಮಕ್ಕೆ ತೆರಳಿದ ಮೇಲೆ ಪಾಂಡವರೆ ಆದಿ ಆಗಿ ತಮ್ಮ ತಮ್ಮ ಮೂಲರೂಪಗಳಲ್ಲಿ ವಿಲೀನವಾದರು. ಪರೀಕ್ಷಿತರಾಜನಿಗೆ 36ನೇ ವಯಸ್ಸಿನವನಿದ್ದಾಗ ರಾಜ್ಯಭಾರವಾಯಿತು. 60ನೇ ವರ್ಷದವನಾದಾಗ ದೇಹ ತ್ಯಾಗವಾಯಿತು. ಇನ್ನೊಂದು ಪುರಾಣದಲ್ಲಿ ಪರೀಕ್ಷಿತನಿಗೆ 95ನೇ ವಯಸ್ಸಾಗಿತ್ತು. ತಕ್ಷಕನಿಂದ ಸಂಹೃತನಾದನೆಂದು ತಿಳಿಸುತ್ತದೆ. ವಿಮರ್ಶೆ ಅಗತ್ಯ.

This much can be presumed that Parikshita was almost 60 years old. Quite old ruled Hastinavathi empire for nearly 36 years and till then he contained Kali whose reign literally had begun. That means Parikshita was quite old and being a Jnani should have taken to Vanaprastha and retired to the forest for penance. However God never willed. That such a Brahmajnani should realise his future and through thapas should attain liberation in order to bring home this aspect Lord Krishna enacted a great drama. ಇನ್ನಾದರೂ ವಿವೇಕ ಬರಲಿ ತನ್ನ ಪೂರ್ವಿಜರಂತೆ. ಊರ್ಧ್ವ ಮಾರ್ಗವನ್ನು ಕುರಿತು ಎಚ್ಚರ ಬರಬೇಕಾಗಿತ್ತು. ಇಂತಹ ಪ್ರಸಂಗವನ್ನು ಜಗನ್ನಾಟಕ ಸೂತ್ರಧಾರಿ ಏರ್ಪಡಿಸಿದ. ಈ ನಾಟಕದಲ್ಲಿ ಕಲಿ ನಿಗ್ರಹ, ಶೃಂಗಿಯ ಶಾಪ, ಶುಕಾಚಾರ್ಯರ ಆಗಮನ, ಭಾಗವತ ಕಥಾಶ್ರವಣ, ತಕ್ಷಕನು ಬರುವುದು, ಕಶ್ಯಪನೆಂಬ ಮಾಂತ್ರಿಕ ವಿಷಪರಿಹಾರ ಮಾಡಲು ಬಂದ ಬ್ರಾಹ್ಮಣ ಇವರೆಲ್ಲಾ ಇಲ್ಲಿಯ ಮುಖ್ಯಪಾತ್ರಗಳು.

ಇನ್ನೊಂದು ಮುಖ್ಯ ವಿಷಯ ತಿಳಿಯಬೇಕು. ಏನು ಅದು ?

ಶಾಪಗ್ರಸ್ಥನಾಗಿ ಗಂಗಾತೀರದಲ್ಲಿ ಪ್ರಾಯೋಪವೇಶ ಮಾಡಿ ಮರುಣೋನ್ಮುಖನಾದ ಪರೀಕ್ಷಿತರಾಜನು ವೈರಾಗ್ಯ ಹೊಂದಿ ರಾಜ ಚಿನ್ಹೆಗಳನ್ನು ತೊರೆದು ಕೃಷ್ಣಾಜಿನದ ಮೇಲೆ ಕುಳಿತು ಅಂತ್ಯಕಾಲವನ್ನೇ ನಿರೀಕ್ಷಣ ಮಾಡುತ್ತಲಿದ್ದ. ಆ ವೇಳೆಗೆ ಭಗವದ್ಭಕ್ತನು ಭಾಗವತೋತ್ತಮನು ಧರ್ಮರಕ್ಷಕನು ಈ ರೀತಿ ಕುಳಿತಿರುವುದನ್ನು ತಿಳಿದು ಅನೇಕ ಋಷಿಗಳೂ, ಮುನಿಗಳೂ ಆಗಮಿಸಿದರು. ಸಭೆಗೆ ಬಂದ ಮಹಾನುಭಾವರು ಯಾರ್‍ಯಾರು ಎಂಬುದನ್ನು ಭಾಗವತದಲ್ಲಿ ಪಟ್ಟಿಮಾಡಿದೆ. ೨೬ಕ್ಕೂ ಹೆಚ್ಚು ಜ್ಞಾನಿಗಳು ಬಂದು ಸೇರಿದರು.

ಅತ್ರಿ, ವಶಿಷ್ಠ, ಚ್ಯವನ, ಶರದ್ವತ, ಅರಿಷ್ಟನೇಮಿ, ಭೃಗು, ಆಂಗೀರಸ, ಪರಾಶರ, ವಿಶ್ವಾಮಿತ್ರ, ಪರಶುರಾಮ, ಉತಥ್ಯ, ಇಂದ್ರಪ್ರಮದಿ, ಇಧ್ಮಾವಹ, ಮೇಧಾತಿಥಿ, ದೇವಲ, ಅರ್ಷ್ಟಿಷೇಣ, ಭಾರದ್ವಾಜ, ಗೌತಮ, ಪಿಪ್ಪಲಾದ, ಮೈತ್ರೇಯ, ಜಾರ್ವ, ಕವಷ, ಅಗಸ್ತ್ಯ, ವೇದವ್ಯಾಸರು, ನಾರದರು ಹೀಗೆ ಅತ್ಯಂತ ಮಹನೀಯರು ಬ್ರಹ್ಮಜ್ಞಾನಿಗಳು ಇದಕ್ಕಿಂತ ಶ್ರೇಷ್ಠವೆಂದರೆ ಸಾಕ್ಷಾತ್ ಶ್ರೀಮನ್ನಾರಾಯಣನ ಅವತಾರ ಭೂತರಾದ ಪರಶುರಾಮ, ವೇದವ್ಯಾಸರು ದಿಗ್ವಿಜಯ ಮಾಡಿದ್ದರು. ಓರ್ವ ರಾಜನು ತನ್ನ ಅಂತಿಮ ಘಳಿಗೆಯಲ್ಲಿ ಇಷ್ಟೊಂದು ಬೃಹತ್ ಸಮಾವೇಶ ಹಿಂದೆ ಎಂದೂ ಆಗಿಲ್ಲ. ತತ್ರಾಪಿ ಸಾಕ್ಷಾತ್ ಭಗವಂತನೇ ಎರಡು ರೂಪದಿಂದ ಉಪಸ್ಥಿತನಾಗಿದ್ದ. ಶ್ರೀಮದ್ಭಾಗವತ ಮಹಾಪುರಾಣವನ್ನು ರಚನೆ ಮಾಡಿ ಪಾಮರೋದ್ಧಾರ ಮಾಡಿದ ಶ್ರೀವೇದವ್ಯಾಸರು ಉಪಸ್ಥಿತರಾಗಿದ್ದರು. ಇಷ್ಟಾದರೂ ಯಾರೂ ಪರೀಕ್ಷಿತನಿಗೆ ಉಪದೇಶ ಮಾಡಲಿಲ್ಲ.

**ಅನ್ಯೈಚ ದೇವರ್ಷಿ ಬ್ರಹ್ಮರ್ಷಿ ವರ್ಯಾ ರಾಜರ್ಷಿ ವರ್ಯಾ ಅರುಣೋದಯಶ್ಚ । ನಾನಾರ್ಷೇಯಪ್ರವರಾನ್ ಸಮೇತಾನ್ । ಅಭ್ಯರ್ಚ್ಯ ರಾಜಾ ಶಿರಸಾ ವವಂದೇ ॥ (ಭಾ. ೧-೧-೯)**

ಈ ಮಹನೀಯರಿಗೆಲ್ಲಾ ಉಚಿತ ಆಸನಗಳನ್ನು ಕೊಟ್ಟನು. ಎಲ್ಲರಿಗೂ ಶಿರಸಾಷ್ಟಾಂಗ ನಮಸ್ಕಾರ ಮಾಡಿ ಅರ್ಘ್ಯ ಪಾದ್ಯ ಪ್ರದಾನ ಮಾಡಿ ಅವರ ಮುಂದೆ ವಿನಯಾನ್ವಿತನಾಗಿ ಕೈಜೋಡಿಸಿ ಹೇಳುತ್ತಾನೆ. "ಇಂದು ನಾನೇ ಧನ್ಯನು. ತಮ್ಮಂತಹ ಜ್ಞಾನಿಶ್ರೇಷ್ಠರು ಹಿರಿಯರ ಕೃಪಾಪಾತ್ರನಾಗಿರುತ್ತೇನೆ. ಬ್ರಾಹ್ಮಣ ಪಾದಧೂಳಿ ನನ್ನ ವಂಶವನ್ನೇ ಪಾವನ ಮಾಡುವುದಾಯಿತು. ಯಾವ ಜನ್ಮದ ಪುಣ್ಯವೋ ನನ್ನ ಹಿರಿಯರು ಮಾಡಿದ ಸತ್ಕಾರ್ಯಗಳೋ, ಧರ್ಮದಿಂದ ಇಷ್ಟೊಂದು ಮಹನೀಯರು ಬಂದಿರುತ್ತೀರಿ. ನಾನು ಮರುಣೋನ್ಮುಖನಾಗಿ ಪ್ರಾಯೋಪವೇಶಕ್ಕಾಗಿ ಕೂತಿರುವೆನು. ನನ್ನ ಅಂತ್ಯಕಾಲದವರೆಗೂ ದಯಮಾಡಿ ಹೋಗಬೇಡಿರಿ ಅಂತ ಸವಿನಯವಾಗಿ ಪ್ರಾರ್ಥಿಸುತ್ತೇನೆ." ಈ ಮಾತನ್ನು ಕೇಳಿದ ಋಷಿವರ್ಯರು "ರಾಜನ್, ನೀನು ಗರ್ಭದಲ್ಲಿರುವಾಗಲೇ ಶ್ರೀಹರಿಯನ್ನು ಕಂಡಿರುವೆ. ಹಾಗೇ ಹರಿಭಕ್ತನಾಗಿ ಬಾಳಿರುತ್ತೀಯ. ಈಗ ನಿನಗೆ ವೈರಾಗ್ಯ ಬಂದಿರುವುದು ಉಚಿತವೇ. ತಕ್ಷಕ ಬರಲಿ. ನಿನ್ನ ದೇಹ ಭಸ್ಮೀಭೂತವಾಗಲಿ. ಇದರಿಂದ ನಿನಗೆ ಅಪಮೃತ್ಯು ದೋಷ ಬರುವುದಿಲ್ಲ. ನೀನು ಅಂತ್ಯ ಗಳಿಗೆಯವರೆಗೂ ಶ್ರೀಶನ ಪಾದವನ್ನು ಸೇರುವವರೆಗೂ



ನಾವು ಇಲ್ಲಿಯೇ ಇರುತ್ತೇವೆ. ಚಿಂತಿಸಬೇಡ. ಶ್ರೀಹರಿ ಧ್ಯಾನಾಸಕ್ತನಾಗು" ಎಂದು ಹೇಳಿದರು. ಆದರೂ ಯಾರೂ ಪರೀಕ್ಷಿತನಿಗೆ ಉಪದೇಶ ಮಾಡಲಿಲ್ಲ. ಏಕೆ ? ವಿಧಿಲೀಲೆ ಹೀಗಿದೆ. ರಾಜನಿಗೆ ಶ್ರೀಮದ್ಭಾಗವತ ಅಮೃತವನ್ನು ಪಾನ ಮಾಡಿಸಲು ಅವನ ನಿಯತ ಗುರುಗಳೇ ಆಗಬೇಕು. ಅದಕ್ಕಾಗಿ ಶ್ರೀ ಶುಕಾಚಾರ್ಯರ ಬರುವಿಕೆಯನ್ನು ನಿರೀಕ್ಷಿಸುತ್ತಿದ್ದರು. ಶ್ರೀ ವೇದವ್ಯಾಸರಲ್ಲಿ ಅಧ್ಯಯನ ಮಾಡಿದ ಮಕ್ಕಳೆಂದೆನಿಸಿಕೊಂಡಿರುವ ಶ್ರೀಶುಕಾಚಾರ್ಯರೇ ಏಕೆ ಬಂದರು ? ಪರೀಕ್ಷಿತನೂ ಶುಕಾಚಾರ್ಯರಿಗೂ ಯಾವ ಹಿಂದಿನ ಸಂಬಂಧವಿತ್ತು ? ವಿಚಾರ ಮಾಡಬೇಕು.

ಶುಕಾಚಾರ್ಯರು ಯಾರು ? ತಿಳಿಯೋಣ :

(ಭಾರತ ಆದಿ-೬೪ ಸಭಾ-೫, ಶಾಂತಿಪರ್ವ ೩೩೨)ರಲ್ಲಿ ತಿಳಿಸಿದಂತೆ. ಶುಕಾಚಾರ್ಯರು ಯಾರು ? ಮಹಾಮಹಿಮೋಪೇತರಾದ ಶ್ರೀಕೃಷ್ಣ ದ್ವೈಪಾಯನ ಮುನಿಗಳು ತಪಸ್ಸು ಮಾಡುತ್ತಿದ್ದರು. ಆಗ ಘೃತಾಚೀ ಎಂಬ ಅಪ್ಸರೆ ಶುಕಿ (ಹೆಣ್ಣುಗಿಳಿ) ರೂಪ ಧರಿಸಿ ಬಂದಳು. ಅವಳ ಸಂಪರ್ಕದಿಂದಾಗಿ ಜನಿಸಿದವರೇ ಶುಕಾಚಾರ್ಯರು. ವೇದವ್ಯಾಸರ ಪುತ್ರರು. ತಂದೆಯಲ್ಲಿ ಧರ್ಮ ರಹಸ್ಯಗಳನ್ನು ಮತ್ತು ವಿದ್ಯಾಭ್ಯಾಸ ಶ್ರೀಮದ್ಭಾಗವತ ಉಪದೇಶವನ್ನು ಪಡೆದರು. ನಂತರ ಪರೀಕ್ಷಿತ ರಾಜನಿಗೆ ಹೇಳಿದರು. (ಆಗ ಅವರಿಗೆ ಹದಿನಾರು ವರ್ಷ ವಯಸ್ಸು. ಭಾದರಾಯಣರ ಪುತ್ರರೆಂಬುವುದಕ್ಕೆ ಶ್ರೀಮದ್ಭಾಗವತ ಪ್ರಥಮ ಸ್ಕಂದದಲ್ಲಿ ಉಲ್ಲೇಖವಿದೆ. ಅನೇಕ ವರ್ಷಗಳ ನಂತರ ಮುಕ್ತಿಯನ್ನು ಹೊಂದಿ ಕೈಲಾಸವನ್ನು ಸೇರಿದರು. (ಭಾರತ ಶಾಂತಿ ೩೩೯) ಶುಕಮುನಿ ಕೊನೆಗೆ ತನ್ನ ಮೂಲರೂಪವಾದ ರುದ್ರನಲ್ಲಿ ಐಕ್ಯರಾದರೆಂದು ತಿಳಿದುಬರುತ್ತೆ.

ಆಗ ಶುಕರು ರುದ್ರಾಂಶರೆಂದು ಖಚಿತವಾಗುತ್ತೆ. ಇದೇ ರುದ್ರಾಂಶರೇ ಅಶ್ವತ್ಥಾಮರಾಗಿ ಹಿಂದೆ ದುರ್ಯೋಧನನ ಪಕ್ಷ ಹಿಡಿದು ಮಹಾಭಾರತ ಯುದ್ಧದಲ್ಲಿ ಹೋರಾಡಿದರು. ಇವರು ಚಿರಂಜೀವಿಗಳು.[1] ಚಿರಂಜೀವತ್ವ ರುದ್ರದೇವರಿಗೆ ಮಾತ್ರ ಲಭ್ಯ. ತಮ್ಮ ತಂದೆ ದ್ರೋಣಾಚಾರ್ಯರಲ್ಲಿ ವಿದ್ಯಾಭ್ಯಾಸ ಮಾಡಿ ಮಹಾಯೋಧರಾಗಿದ್ದವರು. ಕೃಷ್ಣನನ್ನು ಆದರಿಸುತ್ತಿದ್ದರು. ಆದರೆ ರುದ್ರದೇವರಿಗೂ ಕಲಿ ಪ್ರಭಾವ ತಪ್ಪಲಿಲ್ಲ. ಹೀಗಾಗಿ ಧರ್ಮಿಷ್ಠರಾದ ಪಾಂಡವರಲ್ಲಿ ದ್ವೇಷವಿದ್ದಿತು. ಅವರ ತಂದೆಯ ಸಂಹಾರಕ್ಕೆ ಪಾಂಡವರೇ ಕಾರಣವೆಂಬ ಕ್ರೋಧವು ಹುಟ್ಟಿತು, ಕ್ರೋಧವು ಹೀಗೆ ಬೆಳೆಯಿತು. ಅದಕ್ಕೆ ತಕ್ಕಂತೆ ಭಾರತ ಯುದ್ಧದ ಹದಿನೆಂಟನೇ ದಿನ ಮಧ್ಯರಾತ್ರಿ ದುರ್ಯೋಧನನ ಪತನವಾಯಿತು. ಕುರು ರಾಜನನ್ನು ಅನ್ಯಾಯವಾಗಿ ಹೊಡೆದ ಭೀಮಸೇನನ ಬಗ್ಗೆ ದ್ವೇಷವೂ ಇದ್ದಿತು. ಮಧ್ಯರಾತ್ರಿ ದುರ್ಯೋಧನ ಭೀಮಸೇನನ ಗದಾಪ್ರಹಾರದಿಂದಾಗಿ ತೊಡೆ ಮುರಿದು ಭೂಮಿಯ ಮೇಲೆ ರಕ್ತದ ಮುಡುವಿನಲ್ಲಿ ಬಿದ್ದಿರುವುದನ್ನು ಅಶ್ವತ್ಥಾಮರು ನೋಡಿ

[1] **ಅಶ್ವತ್ಥಾಮೋ ಬಲಿರ್ವ್ಯಾಸೋ ಹನುಮಾನ್ ವಿಭೀಷಣಃ ।**
**ಕೃಪ ಪರಶುರಾಮಶ್ಚ ಸಪ್ತೈತೇ ಚಿರಜೀವಿನಃ ॥**

ಮರುಗಿದರು. ಆಗ ದುರ್ಯೋಧನ ಗುರು ಪುತ್ರನಿಗೆ "ಹೇ ಬ್ರಾಹ್ಮಣ ಚಿಂತಿಸಬೇಡ. ನನಗೆ ವೀರಸ್ವರ್ಗವೇ ಆಗುವುದು. ಆದರೆ ನೀನು ನನ್ನ ಎರಡು ಮಾತನ್ನು ನಡೆಸಿಕೊಡು. ೧) ನನ್ನ ಮಡದಿ ಭಾನುಮತಿಯಲ್ಲಿ ಹೋಗಿ ಅವಳಲ್ಲಿ ಪುತ್ರನನ್ನು ಪಡೆದು ಅವನನ್ನೇ ಕುರು ರಾಜ್ಯಕ್ಕೆ ಪಟ್ಟಾಭಿಷಿಕ್ತನನ್ನಾಗಿ ಮಾಡು. ೨) ಈ ಪೃಥಿವಿಯಲ್ಲಿ ಪಾಂಡವರ ವಂಶದ ಕುಡಿಯೂ ಇಲ್ಲದಂತೆ ಮಾಡು. ಇಷ್ಟಾದರೆ ನಾನು ನಿಶ್ಚಿಂತನಾಗಿ ಸಾಯುವೆ" ಅಂತ ಹೇಳಿದುದ್ದಕ್ಕೆ ಮೊದಲನೇ ವಚನವನ್ನು ಪಾಲಿಸಲಿಲ್ಲವಾದರೂ ದುರ್ಯೋಧನನು ನನಗೆ ಇಂಥ ನೀಚಕಾರ್ಯವನ್ನು ಮಾಡೆಂದನಲ್ಲಾ ಎಂದು ಪ್ರತಿಭಟಿಸಲಿಲ್ಲ. ಸುಮ್ಮನೆ ಮೌನವಾಗಿದ್ದರ ಪರಿಣಾಮವಾಗಿ ತಾವು ಈವರೆಗೂ ಸಂಪಾದಿಸಿಕೊಂಡಿದ್ದ ಬ್ರಹ್ಮಚರ್ಯ ತೇಜಸ್ಸು ನಾಶವಾಯಿತು. ಎರಡನೆಯ ವಚನದಂತೆ ಪಾಂಡವರು ಶಿಬಿರಕ್ಕೆ ಹೋದರು. ಶ್ರೀಕೃಷ್ಣ ಪರಮಾತ್ಮನಿಗೆ (ಸರ್ವಜ್ಞ) ತಿಳಿದಿತ್ತು. ಶಿಬಿರದಲ್ಲಿ ದ್ರೌಪದಿಯ ಐದು ಮಕ್ಕಳು ಮಲಗಿದ್ದರು. ಇವರನ್ನು ಕ್ರೂರಿಯಂತೆ ಸಂಹಾರ ಮಾಡಿದರು.

ಮುಂದೆ ಕೃಷ್ಣಾರ್ಜುನ ಭೀಮಸೇನರಿಗೆ ಈ ಅಕೃತ್ಯ ಮಾಡಿದ್ದು ಅಶ್ವತ್ಥಾಮನೆಂದು ತಿಳಿದು ಅವನನ್ನು ಹುಡುಕಿ ಹೆಡೆಮುಡಿ ಕಟ್ಟಿ ತಂದರು. "ಬ್ರಾಹ್ಮಣೋನಹಂತವ್ಯಃ ತತ್ರಾಪಿ ಗುರುಪುತ್ರಃ" ಎಂದು ದ್ರೌಪದಿ ಸಮಾಧಾನ ಕ್ಷಮೆ ಮಾಡುವಂತೆ ಹೇಳಿದಾಗ ಅಶ್ವತ್ಥಾಮರ ಶಿರದಲ್ಲಿದ್ದ ಮಣಿಯನ್ನು ಕಿತ್ತು ಓಡಿಸಿದರು.

ಅಶ್ವತ್ಥಾಮರು ಇದರಿಂದಾಗಿ ಅವಮಾನಿತರಾಗಿ ಇನ್ನಷ್ಟು ದ್ವೇಷ ಹೆಚ್ಚಿತು. ಬ್ರಹ್ಮಾಸ್ತ್ರವನ್ನೇ ಪ್ರಯೋಗ ಮಾಡಿದರು. ಇದಕ್ಕೆ ಪ್ರತಿ ಅರ್ಜುನನೂ ಪ್ರಯೋಗ ಮಾಡಿದ. ಎರಡೂ ಶಿರಾಸ್ತ್ರಗಳೂ ಉರಿಯುತ್ತಾ ಜಗವನ್ನು ಸುಡುವಂತಾಗುತ್ತಿರಲು ವೇದವ್ಯಾಸರು ಬಂದು ಇಬ್ಬರಿಗೂ ಬುದ್ಧಿಹೇಳಿ ತಮ್ಮ ಅಸ್ತ್ರಗಳನ್ನು ಹಿಂತೆಗೆಯುವಂತೆ ಹೇಳಿದಾಗ ಅರ್ಜುನ ವ್ಯಾಸರ ಆದೇಶದಂತೆ ಹಿಂದಕ್ಕೆ ತೆಗೆದುಕೊಂಡನು. ಆದರೆ ಅಶ್ವತ್ಥಾಮರು ಅಸ್ತ್ರವನ್ನು ಹಿಂತೆಗೆದುಕೊಳ್ಳುವ ಸಾಮರ್ಥ್ಯ ಕಳೆದುಕೊಂಡಿದ್ದರು.

**ಅರ್ಜುನಃ ಸಹಸಾಽಜ್ಞಾಯ ಹರೇರ್ಹಾರ್ದಮಥಾಸಿನಾ ।**
**ಮಣಿಂಜಹಾರ ಮೂರ್ಧನ್ಯಂ ದ್ವಿಜಸ್ಸಸಹಮೂರ್ಧಜಂ ॥**

ಅರ್ಜುನನು ಶ್ರೀಹರಿಯ ಹಾರ್ದವನ್ನು ಅರಿತು ಪರಮಾತ್ಮನ ಅಭಿಪ್ರಾಯದಂತೆ ಖಡ್ಗದಿಂದ ಅಶ್ವತ್ಥಾಮಾಚಾರ್ಯರ ಶಿರಸ್ಸಿನಲ್ಲಿದ್ದ ಮಣಿಯನ್ನು ಕಿತ್ತಿದನು. ಅಶ್ವತ್ಥಾಮರು ತೇಜೋಹೀನರಾದರು. ಮುಖವು ಬಾಡಿ ಅಲಕ್ಷ್ಮಿಯ ಆವಾಸ ಸ್ಥಾನವಾಯಿತು. ಅರ್ಜುನ ಆಚಾರ್ಯಪುತ್ರನನ್ನು ಬಿಟ್ಟುಬಿಟ್ಟನು. ತಮ್ಮ ಈ ಅಸ್ತ್ರ ಜ್ವಾಲೆಯನ್ನು ಎಲ್ಲಿ ಪ್ರಯೋಗಿಸಲಿ ಎಂದು ವಿಚಾರ ಮಾಡಿ ಅಭಿಮನ್ಯುವಿನ ಸತಿ ಉತ್ತರೆ ಗರ್ಭಿಣಿಯಾಗಿದ್ದಳು. ಅದು ಪಾಂಡವರ ವಂಶಾಂಕುರ ಬೀಜ. ಅದನ್ನು ಸುಡಲು ಪ್ರಯೋಗ ಮಾಡಿದರು. ಆಗ ಉತ್ತರೆಯು ಓಡಿಬಂದು ಶ್ರೀಕೃಷ್ಣನ ಚರಣಗಳಿಗೆ ಎರಗಿ



**ಪಾಹಿ ಪಾಹಿ ಮಹಾಯೋಗಿನ್ ದೇವ ದೇವ ಜಗತ್ಪತೇ ।**
**ನಾನ್ಯಂ ತ್ವದಭಯಂ ಪಶ್ಯೇ ಯತ್ರ ಮೃತ್ಯುಃ ಪರಸ್ಪರಂ ॥**
**ಅಭಿದ್ರವತಿ ಮಾಮೀಶ ಶರಸ್ತಪ್ತಾಯಸೋ ವಿಭೋಃ ।**
**ಕಾಮಂದಹತು ಮಾಂ ನಾಥ ಮಾಮೇ ಗರ್ಭೋ ನಿಪಾತ್ಯತಾಂ ॥**
**(ಭಾ ೧-೮-೯-೧೦)**

ಹೇ ಕೃಷ್ಣ ಪಾಹಿ ಕಾಪಾಡು. ದೇವ ದೇವ ಜಗತ್ಪತೆ. ನೀನಲ್ಲದೇ ಬೇರೆ ಯಾರೂ ಕಾಪಾಡುವರಿಲ್ಲ. ನನ್ನ ಗರ್ಭದಲ್ಲಿ ಒಂದು ಅಸ್ತ್ರವು ದಹಿಸುತ್ತಿರುವುದು. ರಕ್ಷಿಸು ಎಂದು ಮೊರೆಯಿಟ್ಟಳು. ಶ್ರೀಕೃಷ್ಣ ದ್ವಾರಕೆಗೆ ಹೋಗಬೇಕಾಗಿರುವುದನ್ನು ತಡೆದು ಅಸ್ತ್ರವು ದ್ರೋಣ ಪುತ್ರನದ್ದೇ ಇರುವುದು. ಅದನ್ನು ನಿರೋಧಿಸಿ ಗರ್ಭಸ್ಥ ಶಿಶುವನ್ನು ಕಾಪಾಡುವೆನು ಎಂದು ಶ್ರೀಹರಿ ಸೂಕ್ಷ್ಮ ರೂಪದಿಂದ ಗರ್ಭ ಪ್ರವೇಶಿಸಿ ಗರ್ಭದ ಸುತ್ತಲೂ ಸುಡುತ್ತಿರುವ ಅಸ್ತ್ರವನ್ನು ತನ್ನಯ ಸುದರ್ಶನಚಕ್ರದಿಂದ ಸುಟ್ಟುಬಿಟ್ಟನು. ಅಲ್ಲದೇ ಅಶ್ವತ್ಥಾಮರು ಎಷ್ಟು ಸಲ ಬ್ರಹ್ಮಾಸ್ತ್ರ ಪ್ರಯೋಗ ಮಾಡಿದರೂ ನಿರೋಧಿಸಿ ನಿಸ್ತೇಜವನ್ನಾಗಿ ಮಾಡಿದನು. ಹೀಗೆ ಶ್ರೀಕೃಷ್ಣನು ಪದೇ ಪದೇ ಸುದರ್ಶನಚಕ್ರದಿಂದ ಬ್ರಹ್ಮಾಸ್ತ್ರವು ಅಳಿಸಿಹೋಯಿತು.

ಒಂದು ವಿಚಾರ - ಬ್ರಹ್ಮಾಸ್ತ್ರವು ಬ್ರಹ್ಮದೇವತಾಕವಾದ ಮಹಾ ಅಸ್ತ್ರ. ಇದನ್ನು ನಿಗ್ರಹಿಸಿ ತೇಜೋಹೀನವನ್ನಾಗಿ ಮಾಡಿತು, ಶ್ರೀಕೃಷ್ಣನ ಸುದರ್ಶನ ಚಕ್ರ ಇದರ ಉತ್ತಮತೆಯನ್ನು ಶ್ರೀಕೃಷ್ಣನ ಹರಿಸರ್ವೋತ್ತಮತೆಯನ್ನು ಸಿದ್ಧಪಡಿಸುವುದು.

ಅಶ್ವತ್ಥಾಮರು ಕೊನೆಗೆ ತಮ್ಮ ಮೂರ್ಖತೆಯನ್ನು ಬಿಟ್ಟು ಶ್ರೀಕೃಷ್ಣನ ಸಂಕಲ್ಪಕ್ಕೆ ತಲೆಬಾಗಿ ಹರಿಪಾದಗಳಿಗೆ ಎರಗಿದರು. ಶರಣಾಗತರಾದ ಆಚಾರ್ಯಪುತ್ರನನ್ನು ಕ್ಷಮಿಸಿದ ಮಹಾಕರುಣಾಳು. ಅವರಿಗೆ ಬುದ್ಧಿವಾದವನ್ನು ಹೇಳಿದ ಮೇಲೆ ನಿಜಜ್ಞಾನ ಹೊಂದಿದರು. ಅಶ್ವತ್ಥಾಮರಿಗೆ ಬಂದ ಅಜ್ಞಾನ ಹೋಯಿತು. ರುದ್ರಾಂಶರಾದರೂ ಭಗವಂತನ ವಿಷಯದಲ್ಲಿ ಕೆಲವೊಮ್ಮೆ ಅಜ್ಞಾನ ಬಂದಿತ್ತು. ಈಗಲೂ ಅಂತಹ ಅಜ್ಞಾನವು ಬರಲು ಕಾರಣ ದುರ್ಯೋಧನನ ಸಹವಾಸ. ಅವನ ಅನ್ನ ತಿಂದಿದ್ದರಿಂದ ಒದಗಿತ್ತು. ಕೃಷ್ಣಭಕ್ತರಲ್ಲಿ ದ್ವೇಷವಾಗುವಂತೆ ಆಯಿತು. ಪ್ರಸ್ತುತ ರುದ್ರದೇವರು ಪರಮ ವೈಷ್ಣವರು, ವಿಷ್ಣುಭಕ್ತರು. ಇಂತಹವರಿಗೂ ಕಲಿ ಪ್ರಭಾವ ಬಿಡಲಿಲ್ಲ.

ತಮ್ಮ ನಿಜ ಸ್ವರೂಪ ಜ್ಞಾನವಾಯಿತು. ಕೃಷ್ಣನನ್ನು ಕ್ಷಮೆಯಾಚನೆ ಮಾಡಿದರು. ಶ್ರೀಶನು ಅವರಿಗೆ ಯಥಾರ್ಥ ಜ್ಞಾನಕೊಟ್ಟು ಹೇಳಿದ. ಆಚಾರ್ಯ ಪುತ್ರ, ನೀವು ನನ್ನ ಭಕ್ತರಲ್ಲಿ ಮಹಾದ್ರೋಹ ಮಾಡಿರುತ್ತೀರಿ ಅಂದರೆ ನನ್ನ ದ್ರೋಹವಾದಂತೆ ಆಯಿತು. ಈಗಲಾದರೂ ದ್ರೋಹ ದ್ವೇಷ ಬಿಡಿರಿ. ನೀವು ಉತ್ತರಾಗರ್ಭಸ್ಥ ಶಿಶುವನ್ನು ಸಂಹರಿಸಲು ಹೊರಟು ಮಹಾಪರಾಧ ಮಾಡಿರುತ್ತೀರಿ. ಚಿಂತೆಯಿಲ್ಲ. ಈಗ ಆ ಅಪರಾಧಕ್ಕೆ ಪ್ರಾಯಶ್ಚಿತ್ತ ರೂಪವಾಗಿ ಅದೇ ಶಿಶು ಮುಂದೆ ಪರೀಕ್ಷಿತ(**ವಿಷ್ಣುರಾತ**)ನೆಂದು ಪಾಂಡವರ ರಾಜ್ಯಕ್ಕೆ

ಚಕ್ರವರ್ತಿಯಾಗುತ್ತಾನೆ. ಅಖಂಡ ಭೂಮಂಡಲಾಧಿಪತಿಯಾಗಿ ಪರಮ ಭಾಗವತನೆಂದೆನಿಸಿ ಧರ್ಮದಿಂದ ರಾಜ್ಯವಾಳುತ್ತಾನೆ. ಕಲಿಯನ್ನು ನಿಗ್ರಹಿಸುತ್ತಾನೆ. ಆದರೆ ಅವನು ಋಷಿ ಶಾಪ ಕಾರಣ ಸರ್ಪದಿಂದ ಕಚ್ಚಲ್ಪಡುತ್ತಾನೆ. ತನ್ನ ಅಂತಿಮ ಕಾಲ ಬಂದಿತೆಂದು ತಿಳಿದು ಗಂಗಾತೀರದಲ್ಲಿ ಮರುಣೋನ್ಮುಖನಾಗಿ ಪ್ರಾಯೋಪವೇಶಕ್ಕಾಗಿ ಸರ್ವಸಂಗ ಪರಿತ್ಯಾಗ ಮಾಡಿರುತ್ತಾನೆ. ಆ ಹೊತ್ತಿಗೆ ನಾನು ಬಾದರಾಯಣ ರೂಪದಿಂದ ಶ್ರೀಮದ್ಭಾಗವತವನ್ನು ರಚಿಸಿರುತ್ತೇನೆ. ನೀವು ನನ್ನ ಅನುಗ್ರಹದಿಂದ ನನ್ನ ಮಗನಾಗಿ ಶುಕಾಚಾರ್ಯರೆಂದು ಅವತಾರ ಮಾಡಿ. ಶ್ರೀಮದ್ಭಾಗವತವನ್ನು ನನ್ನಲ್ಲಿ ಅಧ್ಯಯನ ಮಾಡುವಿರಿ. ಇಂತಹ ಉತ್ತಮೋತ್ತಮ, ಮೋಕ್ಷಪ್ರದ ಪುರಾಣವನ್ನು ಪರೀಕ್ಷಿತ ರಾಜನಿಗೆ ಆ ಅಮೃತವನ್ನು ಪಾನ ಮಾಡಿಸಿರಿ. ಇದರಿಂದಾಗಿ ನಿಮ್ಮ ಹಿಂದಿನ ಕಳಂಕ ನಶಿಶಿ ಶ್ರೀಮದ್ಭಾಗವತ ಪ್ರವಚನಾಚಾರ್ಯರೆಂದೇ ಲೋಕದಲ್ಲಿ ಪ್ರಖ್ಯಾತರಾಗುತ್ತೀರಿ ಎಂದು ಉಪದಿಷ್ಟಿತರಾದ ಅಶ್ವತ್ಥಾಮಾಚಾರ್ಯರೇ (ರುದ್ರಾಂಶರು) ಶ್ರೀಮದ್ಭಾಗವತವನ್ನು ಪರೀಕ್ಷಿತರಿಗೆ ಶುಕಾಚಾರ್ಯ(ರುದ್ರಾಂಶ)ರಾಗಿ ಶ್ರವಣ ಮಾಡಿಸಿದರು. ಹೀಗೆ ಶುಕಾಚಾರ್ಯರಿಗೂ ಪರೀಕ್ಷಿತ ರಾಜನಿಗೂ ಶ್ರೀಮದ್ಭಾಗವತ ಪ್ರವಚನ, ಶ್ರವಣದಿಂದ ಸಂಬಂಧವಾಯಿತೆಂದು ತಿಳಿಯಬಹುದು.

ಸಂಗ್ರಹ ಮತ್ತು ವಿವರಣೆ :

**ಶ್ರೀ ಬದರೀನಾಥಾಚಾರ್ಯ ಘೂಳಿ ಎಂ.ಎ**